19

# ನೀನು ಯಾವುದಕ್ಕೆ ಸಾಯುವವನಾಗಿದ್ದೀ

# (6:8-8:4)

ನಾನು ಒಂದು ವೇಳೆ "ಸ್ತೇಫನ" ಎಂಬ ಹೆಸರನ್ನು ಹೆಸರಿಸಿಡ್ಡೆಯಾದರೆ ನಿಮ್ಮಲ್ಲಿ ಅನೇಕರು ಈತನು "ಮೊದಲ ಕ್ರೈಸ್ತ ಹತಸಾಕ್ಷಿ" ಎಂದು ಹೇಳುವವರಾಗಿದ್ದೀರಿ, ಒಂದು ವೇಳೆ ನಾನು "ಕ್ರೈಸ್ತರಲ್ಲಿ ಮೊದಲ ಹತಸಾಕ್ಷಿ" ಎಂದು ಹೇಳಿದರೆ ಸ್ತೇಫನನ ಹೆಸರನ್ನೇ ಹೇಳುವಿರಿ. ಕ್ರಿಸ್ತನಿಗಾಗಿ ಪ್ರಾಣತೆತ್ತ ಸಾವಿರಾರು ಜನರಲ್ಲಿ ಮೊದಲನೆಯದಾಗಿ ಸ್ತೇಫನನ ಹೆಸರು ಎಂದಿಗೂ ನಮ್ಮ ಹೃದಯದ ಪವಿತ್ರಸ್ಥಾನದಲ್ಲಿ ಹೊಳೆಯುತ್ತಾ ಇರುತ್ತದೆ. ಸ್ತೇಫನನ ಬಗೆಗೆ ನಾವು ಇನ್ನು ಏನೆಲ್ಲ ತಿಳಿದಿರುತ್ತೇವೆ? ಆತನು ತನ್ನ ನಂಬಿಕೆಗಾಗಿ *ಯಾಕೆ* ಸತ್ತನು ಎಂದು ನಾವು ತಿಳಿದಿದ್ದೇವೆಯೋ? ನಮ್ಮ ಕ್ರೈಸ್ತ ಪರಂಪರೆಗೆ ಆತನು ಮಾಡಿದ ಕೊಡುಗೆಯನ್ನು ನಾವು ಅರ್ಥೈಸಿಕೊಂಡಿದ್ದೇವೆಯಾ?

ಸ್ತೇಫನನು ಆಕಾಶದುದ್ದಕ್ಕೂ ಹೊಳೆದು ಮಾಯವಾಗುವ ಆಕಾಶಕಾಯದಂತಿದ್ದಾನೆ. ಈತನು ಉಪಚಾರಕ್ಕಾಗಿ (ಉಟೋಪಚಾರ) ಆದುಕೊಂಡವರಲ್ಲಿ ಒಬ್ಬನಾಗಿ ಅಧ್ಯಾಯ 6ರಲ್ಲಿ ನಮಗೆ ಪರಿಚಯಿಸಲ್ಪಟ್ಟಿದ್ದಾನೆ. 7ನೆಯ ಅಧ್ಯಾಯದ ಕೊನೆಯ ಭಾಗದಲ್ಲಿ ಬರುವಾಗ, ಅವನಿಲ್ಲ. ಈ ಅಲ್ಪಾವಧಿಯಲ್ಲಿ ಅವನು ದೇವರಿಂದ ಮಹತ್ತರವಾಗಿ ಆತನ ಉದ್ದೇಶಗಳನ್ನು ನೆರವೇರಿಸುವುದಕ್ಕೆ ಆತನು ಬಲವಾಗಿ ಉಪಯೋಗಿಸಲ್ಪಟ್ಟನು.

ಆತನ ಪೋಷಕರಿಂದ ಪಡೆದ ಹೆಸರು ವಿಜಯೀಭವವಾದ ಅಂತ್ಯವನ್ನು ಮುಂತಿಳಿಸುವಂತದ್ದಾಗಿತ್ತು. "ಕಿರೀಟ"ಕ್ಕೆ ಎರಡು ಪದಗಳು ಹೊಸ ಒಡಂಬಡಿಕೆಯಲ್ಲಿ ಬಳಿಕೆಯಾಗಿದೆ: *diadema* ಎಂದು ಬಳಸಲ್ಪಟ್ಟಿದ್ದು ಎಂಬ ಪದವನ್ನು ಆಳುವ ಅರಸನ ಕಿರೀಟ (ಅರಸನ ತಲೆಯ ಮೇಲೆ ಇರಿಸುವ ಕಿರೀಟ [ಪ್ರಕಟಣೆ 19:12ಫ]) - *stephanos* ಎಂಬಂಥದರಿಂದ ನಾವು ಪಡೆದಿದ್ದೇವೆ ಮತ್ತು ಎರಡನೆಯದಾಗಿ ವಿಜಯಯದ *ಕಿರೀಟವಾಗಿತ್ತು* (ಓಲಂಪಿಕ ಪಂದ್ಯದಲ್ಲಿ ವಿಜಯಿಗಳ ತಲೆಯ ಮೇಲೆ ಹಾಕುವಂತಹ [ಎಲೆಗಳ] ಪ್ರಶಸ್ತಿಯ ಮಾಲೆ). ಮೇಲೆ ಹೇಳಿದ ಕೊನೆಯಪದವು ಪ್ರಕಟಣೆ 2:10ರಲ್ಲಿ ಬಳಿಕೆಯಾಗಿದೆ: "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ *ಜಯಮಾಲೆಯನ್ನು* ಕೊಡುವೆನು" ಎಂಬ ಪದಗಳನ್ನು ಹೊಂದಿತ್ತು. ಸ್ತೇಫನನು ಮರಣನವರೆಗೂ ನಂಬಿಗಸ್ತನಾಗಿಯೇ ಇದ್ದನು, ಆತನ ಜೀವವು ವಿಜಯದ ಜಯಮಾಲೆಯನ್ನು ಹೊಂದಿತು!

ಈ ಪಾಠದ ನಂತರ ಮತ್ತು ಮುಂದಿನ ಪಾಠಗಳಲ್ಲಿನ ಎರಡರಲ್ಲೂ, ನಾವು ಸ್ತೇಫನನ ಬಗ್ಗೆ ಮತ್ತು ಆತನ ಕಾರ್ಯದ ಬಗೆಗೆ ಒಳ್ಳೆಯ ರೀತಿಯಲ್ಲಿ ಅರಿತುಕೊಳ್ಳಬಹುದೆಂದು ನಾನು ನಿರೀಕ್ಷಿ ಸುವವನಾಗಿದ್ದೇನೆ. ಆತನ ಉದಾಹರಣೆಯು ನಾವು ನಮ್ಮ ಜೀವಿತವನ್ನು ಅತಿ ಹತ್ತಿರವಾಗಿ ನೋಡುವಂತೆ ಅದು ಸಹಾಯಕಾರಿ ಆಗಿರುತ್ತದೆ ಎಂದು ಆಶಿಸುವವನಾಗಿದ್ದೇನೆ. ಸ್ತೇಫನನು ತನ್ನ ನಂಬಿಕೆಗಾಗಿ ಸಾಯಲು ನೀಡಲು ಸಿದ್ಧನಾದನು. ಆದರೆ ನಾವು ಯಾವುದಕ್ಕೋಸ್ಕರ ಪ್ರಾಣಕೊಡಲು ಸಿದ್ಧರಾಗಿದ್ದೇವೆ?

## ಚರ್ಚೆಗೆ ಅರ್ಹವಾದ ನಂಬಿಕೆ (6:8-12)

ನಮ್ಮ ಕಥೆಯು 6:8ರಿಂದ ಪ್ರಾರಂಭವಾಗುತ್ತದೆ: "ಸ್ತೇಫನನು ದೇವರ ಕೃಪೆಯಿಂದಲೂ (KJVಯಲ್ಲಿ; "ನಂಬಿಕೆ") ಬಲದಿಂದಲೂ ತುಂಬಿದವನಾಗಿ ಜನರಲ್ಲಿ ಮಹಾ ಅದ್ಭುತ

ಕಾರ್ಯಗಳನ್ನೂ ಸೂಚಕಕಾರ್ಯಗಳನ್ನೂ ಮಾಡುತ್ತಾ ಇದ್ದನು."[1] ಸ್ತೇಫನನು ಒಂದು ವಿಶೇಶವಾದ ಮಹತ್ವವನ್ನು ಹೊಂದಿದ್ದನು ಎಂದು ಇದು ಪರಿಚಯಿಸುತ್ತದೆ, ಲೆವಿಸ್ ಫಾಸ್ಟರರ ಟಿಪ್ಪಣಿಯಂತೆ:

> ಈವರೆಗೆ, ಅಪೊಸ್ತಲರ ಕೃತ್ಯಗಳು ಹೇಳುವಂತೆ ಅಪೊಸ್ತಲರು ಮಾತ್ರ ಅದ್ಭುತ ಕಾರ್ಯಗಳನ್ನು ಮಾಡುತ್ತಾ ಇದ್ದರು (2:43; 3:4-8; 5-12). ಆದರೆ ಈಗ, ಅಪೊಸ್ತಲರು ತಲೆಯ ಮೇಲೆ ಕೈಯಿಟ್ಟ ನಂತರ, ಸ್ತೇಫನನೂ ಸಹ ಮಹಾ ಅದ್ಭುತ ಕಾರ್ಯಗಳನ್ನೂ ಸೂಚಕಕಾರ್ಯಗಳನ್ನೂ ಮಾಡತೊಡಗಿದನು. ಫಿಲಿಪ್ಪನು ಸಹ ಬೇಗನೇ ಅದೇ ರೀತಿಯಲ್ಲಿ ಕಾರ್ಯಗಳನ್ನು ಮಾಡಿದನು (8:6).[2]

ಹಿಂದೆ ನಾವು ಹೇಳಿದಂತೆ ಸ್ತೇಫನನು ನಂಬಿಕೆಯಿಂದಲೂ (6:5), ಜ್ಞಾನದಿಂದಲೂ (6:3), ಮತ್ತು ಪರಿಶುದ್ಧಾತ್ಮನಿಂದಲೂ ತುಂಬಿದವನಾಗಿದ್ದನು (6:3, 5). ಈಗ ನಾವು ಓದುವುದೇನೆಂದರೆ "ಆತನು ದೇವರ ಕೃಪೆಯಿಂದಲೂ[3] ಬಲದಿಂದಲೂ ತುಂಬಿದವನಾಗಿದ್ದನು" ಎಂದು. ಆತನು ಸಂಪೂರ್ಣವಾಗಿ ಅಥವಾ ದೇವರಿಂದ ನಿಯಂತ್ರಿತನಾದ ಮನುಷ್ಯನಾಗಿದ್ದನು ಮತ್ತು ಎಲ್ಲವೂ ದೇವರಿಗೆ ಸಂಬಂಧಿತವಾದವುಗಳಿಂದ ನಿಯಂತ್ರಿತನಾದ ಮನುಷ್ಯನಾಗಿದ್ದನು!

ಸ್ತೇಫನನು ಉಟೋಪಚಾರದ ವಿಶೇಷವಾದ ಸೇವೆಯನ್ನು ಹೊಂದಿದ್ದನು. ಆತನು ಮಾಡಲಿಲ್ಲ, ಹೇಗೋ, ದೇವರ - ನೀಡಿದ ಇತರ ವರಗಳನ್ನು ಬಳಸದೇ ಇರುವುದಕ್ಕಾಗಿ ನೆವವನ್ನು ಹೇಳಲು ಇದನ್ನು ನೆಪವಾಗಿ ಬಳಸಲಿಲ್ಲ.[4] ಆತನು ಜನರನ್ನು ಸ್ವಸ್ಥ ಮಾಡಿದನು ಮತ್ತು ಯೇಸುವಿನ ಬಗ್ಗೆ ಹೇಳಿದನು. ಈ ವಿಚಾರಗಳ, ದಾಖಲೆಯ ವಿವರಗಳನ್ನು ನಾವು ಓದುವಂತೆ, ಎಲ್ಲ ಸಾರ್ವಜನಿಕ ಬೋಧನೆಗಳು ಅಪೊಸ್ತಲರಿಂದ ಮಾಡಲ್ಪಟ್ಟವು, ಮತ್ತು ದೇವಾಲಯದಲ್ಲಿ ಮಾಡಲ್ಪಟ್ಟವು.[5] ಈಗ, ಸ್ತೇಫನನು ಧೈರ್ಯದಿಂದ ಯೇಸುವಿನ ಸಂದೇಶವನ್ನು ಸಭಾಮಂದಿರದೊಳಗೆ ಒಯ್ದನು. "ಆದರೆ ಲಿಬರ್ತೀನರೆಂಬವರ ಸಮಾಜದವರಲ್ಲಿಯೂ ಕುರೇನ್ಯದವರ ಮತ್ತು ಅಲೆಕ್ಸಾಂದ್ರಿಯದವರ ಸಮಾಜದವರಲ್ಲಿಯೂ ಕಿಲಿಕ್ಯ ಆಸ್ಯ ಸೀಮೆಗಳಿಂದ ಬಂದವರ ಸಮಾಜದಲ್ಲಿಯೂ ಕೆಲವರು ಎದ್ದು ಸ್ತೇಫನನ ಸಂಗಡ ತರ್ಕಮಾಡುತ್ತಾ ಇರಲು ..." (ವಚನ 9) ಎಂದು ಓದುತ್ತೇವೆ.

ಸಭಾಮಂದಿರದಲ್ಲಿ ಎಂದು ಸೂಚಿತವಾದುದು ಅಪೊಸ್ತಲರ ಕೃತ್ಯದಲ್ಲಿ ಮೊದಲನೆಯ ಸಾರಿಸೂಚಿತವಾದದ್ದಾಗಿದೆ. ಸಭಾಮಂದಿರದ ಆರಂಭವು, ಬೆಬಿಲೋನಿನ ಸೆರೆಯಾಳುವಿಕೆಯ ಆದಿಯಲ್ಲಿ ಯೆಹೂದಿಗಳು ದೇವಾಲಯದಲ್ಲಿ ಆರಾಧನೆ ಮಾಡದೆ ಇರುವಂಥ ಸಮಯದಲ್ಲಿ ಹೊಂದಿತ್ತು.[6] ಅಪೊಸ್ತಲರ ಕಾಲದಲ್ಲಿ, ಸಭಾಮಂದಿರವು ರೋಮ ಚಕ್ರಾಧಿಪತ್ಯದೆಲ್ಲೆಡೆ ಹಂಚಿಹೋಗಿರುವದನ್ನು ಕಾಣುತ್ತೇವೆ. ಯೆರೂಸಲೇಮು ಅವುಗಳಲ್ಲಿ ನೂರಾರುಗಳನ್ನು ಹೊಂದಿತ್ತು.[7] ಸ್ತೇಫನನು ಸುವಾರ್ತೆಯನ್ನು ಕೊಂಡೊಯ್ದು ನಿರ್ಧಿಷ್ಟವಾದ ಸಭಾಮಂದಿರವು "ಲಿಬರ್ತಿಯರ ಸಮಾಜವೆಂಬುದಾಗಿ ಕರೆಯಲ್ಪಡುತ್ತಿದ್ದ";[8] ಈ ಸಭಾಮಂದಿರದ ಸದಸ್ಯತ್ವವು ದಾಸತ್ವದಲ್ಲಿ ಇರುವಂತಹ ಜನರನ್ನು ಬಿಡುಗಡೆ ಮಾಡಿದ ಜನರನ್ನು ಹೊಂದಿದ್ದೇ ಆಗಿದೆ.[9] ಅವರಲ್ಲಿ ಕೆಲವರು ಕುರೇನ್ಯರು[10] ಅಥವಾ ಅಲೆಕ್ಸಾಂದ್ರೀಯರು ಆಗಿದ್ದು, ಇವೆರಡು ದಕ್ಷಿಣ ಮೆಡಿಟೇರಿಯನ್ ಸಮುದ್ರದ, ಉತ್ತರ ಆಫ್ರಿಕಾದಲ್ಲಿ ನೆಲಿಸಿರುವಂತವುಗಳಾಗಿವೆ. ಇನ್ನಿತರರು ಕಿಲಿಕ್ಯ ಅಥವಾ ಆಸ್ಯ ಸೀಮೆಯವರಾಗಿದ್ದರು, ಸಮುದ್ರದ ಉತ್ತರ ಭಾಗದಲ್ಲಿರುವ,[11] ಇವೆರೆಡು ಏಷಿಯಾ ಮೈನರರನಲ್ಲಿ ನೆಲಿಸಿರುವಂತವುಗಳಾಗಿವೆ. ಅಲ್ಲಿ ಯಾರೊಬ್ಬರೂ ಪಾಲಿಸ್ಟೇನಿನವರು ಇರಲಿಲ್ಲ, ಸ್ತೇಫನನಂತೆ ಅಲ್ಲಿರುವ ಎಲ್ಲರೂ ಗ್ರೀಕ್ ಭಾಷೆಯ ಯೆಹೂದಿಗಳಾಗಿದ್ದರು,[12] ಬಹುಶಃ ಸ್ತೇಫನನು ಕ್ರೈಸ್ತನಾಗುವ ಮೊದಲು ಈ ಸಭಾಮಂದಿರಕ್ಕೆ ಹೋಗಿರಬಹುದು.

ಕುರೇನ್ಯ ಅಲೆಕ್ಸಾಂದ್ರೀಯ, ಕಿಲಿಕ್ಯ, ಮತ್ತು ಆಸ್ಯಗಳನ್ನು ಲೂಕನು ಸೂಚಿಸಿದ್ದು

ಬಹುಶಃ ಈ ಪ್ರದೇಶಗಳಿಂದ ಬಂದ ಜನರು ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿ ನಂತರದಲ್ಲಿ ಪ್ರಖ್ಯಾತ ಸ್ಥಳದವರಾಗಿರಬೇಕು.[13] ಸ್ತೇಫನನು ಬಿತ್ತರಿಸಿದ ಬೀಜಗಳು ಒಂದು ದಿನ ಸುಗ್ಗಿಯನ್ನು ತರುವುದೆಂಬ ನಿರೀಕ್ಷೆಯು ಇತ್ತು. ಲೂಕನಿಂದ ಹೆಸರಿಸಿದ ಬಲು ಮಹತ್ವವಾದ ಸ್ಥಳವು ಕಿಲಿಕ್ಯವಾಗಿತ್ತು. ಕಿಲಿಕ್ಯದ ರಾಜಧಾನಿಯು ತಾರ್ಸಸ್ ಆಗಿತ್ತು ಮತ್ತು ತಾರ್ಸದ ಯೌವನಸ್ಥನಾದ ಸೌಲನು, ಈಗ ತನ್ನ ಮನೆಯನ್ನು ಯೆರೂಸಲೇಮಿನಲ್ಲಿ ಮಾಡಿದ್ದನು (7:58; 22:3). ಸೌಲನು ಬಹುಶಃ ಇತರ ಕಿಲಿಕ್ಯದವರು ಆರಾಧನೆಗೆ ಬರುವ ಸಭಾಮಂದಿಗಳಿಗೆ ಹೋಗಿರಬಹುದು. ಆತನು ಬಹುಶಃ ಸ್ತೇಫನನು ಯೇಸುಕ್ರಿಸ್ತನ ಬಗ್ಗೆ ಹೇಳಲೆಂದು ಬಂದಾಗ ಆತನು ಅಲ್ಲಿ ಉಪಸ್ಥಿತನಿರಬಹುದು.[14]

ಸಭಾಮಂದಿರದಲ್ಲಿ ಸ್ತೇಫನನ ಸಂದೇಶದ ಸರಿಯಾದ ವಿಷಯವನ್ನು ನಾವು ಅರಿಯೆವು. ಆತನ ಬೋಧನೆಗಳಲ್ಲಿ ಹೆಚ್ಚಿನವು ಖಚಿತವಾಗಿ ಅಪೊಸ್ತಲರಿಂದ ಅಧ್ಯಾಯ 2ರಿಂದ 4ನೆಯ ಅಧ್ಯಾಯದವರೆಗೆ ಬೋಧಿಸಿದ ಸುವಾರ್ತೆಗಳಂತೆಯೇ ಇವೆ. ಬಹುಶಃ ದೇವರು ಸ್ತೇಫನನ ಧ್ವನಿಯನ್ನು ಸಮಾರೋಪವಾಗಿ ಧ್ವನಿತವಾಗುವಂತೆ ನಡಿಸಿದನೇ ಹೊರತು ಮಾತನಾಡಲು ಅಲ್ಲ.[15] ಪೇತ್ರ ಮತ್ತು ಅತರ ಅಪೊಸ್ತಲರು ರಕ್ಷಣೆಯು ಯೇಸುಕ್ರಿಸ್ತನಿಂದಲ್ಲದೇ ಇನ್ನಾರಿಂದಲೂ ಸಿಕ್ಕುವುದಿಲ್ಲ ಎಂದು ಒತ್ತಿ ಹೇಳಿದರು (4:12). ಬಹುಶಃ ಸ್ತೇಫನನು ಯೆಹೂದಿಗಳು ಮಾಡದಂತಹ ನಿಶ್ಚಿತವಾದ ಸಮಾರೋಪಕ್ಕೆ ಅನ್ವಯಿಸಿ ಮಾತನಾಡಿದನು, ಅದೇನೆಂದರೆ ದೇವರು ಆದುಕೊಂಡ ಮಕ್ಕಳಾಗಿದ್ದುದರ ಆಧಾರದ ಮೇಲೆ, ಅಥವಾ ಮೋಶೆಯ ಧರ್ಮಶಾಸ್ತ್ರವನ್ನು ಕಾದುಕೊಂಡವರ ಮತ್ತು ಸ್ಫೂರ್ತಿಗೊಳಿಸದ ಯೆಹೂದಿ ಸಂಪ್ರದಾಯಗಳ ಮೂಲದ ಮೇಲೆ ಅಥವಾ ದೇವಾಲಯದಲ್ಲಿ ಆರಾಧನೆ ಮಾಡುವ ಆಧಾರದ ಮೇಲೆ ರಕ್ಷಿಸಲ್ಪಡುವುದಿಲ್ಲ.[16]

ಸ್ತೇಫನನ ಸಂದೇಶವು ಏನೇ ಆಗಿರಲಿ, ಅದು ಸಭಾಮಂದಿರಲ್ಲಿನ ಕೆಲವರಲ್ಲಿ ಸಿಟ್ಟನ್ನು ಎಬ್ಬಿಸಿತು:[17] "ಆದರೆ ಕೆಲವರು ಎದ್ದು ಸ್ತೇಫನನ ಸಂಗಡ ತರ್ಕಮಾಡುತ್ತಾ ಇರಲು" ಸ್ತೇಫನನ ಮಾತುಗಳನ್ನು ಶಾಂತಗೊಳಿಸಲು ಯತ್ನಿಸಿದವರಲ್ಲಿ ಸೌಲನೂ ಒಬ್ಬನು. ಆದನು ಸ್ಫುರದ್ರೂಪಿಯಾದ ಯೆಹೂದಿ ಮನಸ್ಸಿನ ಯೌವಸ್ಥನಾಗಿದ್ದನು, ಹೇಗೋ, ಆತನು ಹಿಂತಿರುಗಲಿಲ್ಲ: ಆತನು ತನ್ನ ನೆಲದಲ್ಲಿ ನಿಂತನು. ಅಲ್ಲಿ ವಿವಾದಾತ್ಮಕನಾಗಿರುವುದಕ್ಕೂ (ನೋಡಿ 1 ಕೋರಿಂಥ 1:11; ತೀತ 3:9; KJVಯನ್ನು ಗಮನಿಸಿ) ಮತ್ತು ನಿಜವಾಗಿ ಇರುವ ಸಂಗತಿಗಳಲ್ಲಿ ಸಂತುಷ್ಟನಾಗಿರುವುದು ಇವೆರಡರ ಮಧ್ಯ ವ್ಯತ್ಯಾಸಗಳಿವೆ. "ಯೂದನು ನಂಬಿಕೆಯನ್ನು ಕಾಪಾಡಿಕೊಳ್ಳಲು ನೀವು ಹೋರಾಡಬೇಕೆಂದು" ಬರೆಯುತ್ತಾನೆ (ಯೂದ 3), "ಕಳವಳಪಡದೆ ಕ್ರಿಸ್ತನನ್ನು ಕರ್ತನೆಂದು ನಿಮ್ಮ ಹೃದಯಗಳಲ್ಲಿ ಪ್ರತಿಷ್ಠೆಪಡಿಸಿರಿ. *ನಿಮ್ಮಲ್ಲಿರುವ ನಿರೀಕ್ಷೆಗೆ ಆಧಾರವೇನೆಂದು ಕೇಳುವವರಿಗೆಲ್ಲರಿಗೆ ಉತ್ತರ ಹೇಳುವುದಕ್ಕೆ ಯಾವಾಗಲೂ ಸಿದ್ಧವಾಗಿರಿ*; ಆದರೆ ಅದನ್ನು ಸಾತ್ವಿಕತ್ವದಿಂದಲೂ, ಮನೋಭೀತಿಯಿಂದಲೂ ಹೇಳಿರಿ" ಎಂದು ಪೇತ್ರನು ಬರೆಯುತ್ತಾನೆ (1 ಪೇತ್ರ 3:15; ಒತ್ತಿ ಹೇಳಿದ್ದು ನನ್ನದು). ಕೆಲವರು ಹೇಳುವುದೇನೆಂದರೆ ಧಾರ್ಮಿಕ ಚರ್ಚೆಗಾಗಿನ ದಿನಗಳು ಮುಗಿದವು. ಕರುಣೆಯಿಲ್ಲದ ದೇವರಿಲ್ಲದ, ಕ್ರೈಸ್ತರಿಲ್ಲದ ಚರ್ಚೆಯ ದಿನಗಳು ದಿನಗಳು ಮುಗಿದವು. ಚರ್ಚೆಯನ್ನು ನಡೆಸುವ ದಿನಗಳು "ಸಭ್ಯತೆಯಿಂದ ಮತ್ತು ಭಕ್ತಿಭಾವದಿಂದ" ತುಂಬಿದ ದಿವಸಗಳ ಚರ್ಚೆಗಳು ಇಂದು ನಡೆಯುತ್ತಾ ಇವೆ.

ಆತನ ಎದುರಾಳಿಗಳು ಬಹಳ ಜನರಿದ್ದಾಗ ಸ್ತೇಫನನು ಒಬ್ಬನೇ ಆಗಿದ್ದನು. ಅವರು ಪ್ರಶ್ನೆಗಳಿಂದ ಅವನನ್ನು ಜರಿದರು, ವಾದಗಳು, ಮತ್ತು ಅಡೆತಡೆಗಳು ಎಲ್ಲಡೆಯಿಂದ ಇರಿದವು. ಅಂಥ ಪರಿಸ್ಥಿತಿಯಲ್ಲಿ ಸತ್ಯವನ್ನು ಸಮರ್ಥಿಸಿಕೊಳ್ಳುವದು ಕಷ್ಟದಾಯಕವಾದ ಸಂಗತಿಯಾಗಿತ್ತು! ವಚನ 10 ಹೇಳುವಂತೆ, "ಅವನ ಮಾತಿನಲ್ಲಿ ಕಂಡುಬಂದ ಜ್ಞಾನವನ್ನೂ ಪವಿತ್ರಾತ್ಮನ[18] ಶಕ್ತಿಯನ್ನೂ ಎದುರಿಸಲಾರದೆ ಹೋದರು." ಸ್ತೇಫನನು ತನ್ನ ಎದುರಾಳಿಗಳಿಗೆ

ಹೇಗೆ ಉತ್ತರಿಸಿದನೆಂದು ಅಧ್ಯಾಯ 7ರಲ್ಲಿನ ಸ್ತೇಫನನ ಬೋಧನೆಯು ಸೂಚಿಸುತ್ತದೆ: ಆತನು ತಾನುಮಾಡಿದ ಪ್ರತಿಯೊಂದೂ ಅಂಶದ ಮೇಲೂ ಹಳೆಯ ಒಡಂಬಡಿಕೆಯಿಂದ[19] "ಅಧ್ಯಾಯಗಳನ್ನೂ ವಚನಗಳನ್ನೂ" ಉಲ್ಲೇಖಿಸಿದನು! ತಮ್ಮದೇ ಆದ ದೇವವಾಕ್ಯಗಳೊಡನೆ ಅವರು ಹೇಗೆ ವಾದಮಾಡಿಯಾರು?

ಒಂದು ವೇಳೆ ಸ್ತೇಫನನ ದಿವ್ಯ ಜ್ಞಾನದಿಂದ ಸೋತವರಲ್ಲಿ ಸೌಲನ ಒಬ್ಬನಾಗಿದ್ದರೆ, ಆತನ ಸೋಲು ಆತನನ್ನು ಬೇಗನೇ ವೇದನೆಗೆ ಒಳಗಾಗುವಂತೆ ಮಾಡುತ್ತಿತ್ತು ಮತ್ತು ಯೇಸುವಿನ ಹಿಂಬಾಲಕರೆಲ್ಲರ ಮೇಲೆ ಆತನ ದ್ವೇಷಕ್ಕೆ ದಳ್ಳುರಿಯನ್ನು ಸೇರಿಸಿದಂತಾಗುತ್ತಿತ್ತು![20] (ನಾನು ಊಹಿಸುತ್ತೇನೆ, ಒಂದು ದಿನ ಪೌಲನು ಲೂಕನಿಗೆ ಇದರ ಬಗೆಗೆ ಹೇಳಿರಬಹುದು, ಆತನು ತನ್ನ ತಲೆಯನ್ನು ಅಲ್ಲಾಡಿಸುತ್ತಾ: "ನಾನು ಯೋಚಿಸಬಹುದಾದ ಪ್ರತಿಯೊಂದೂ ದೇವವಾಕ್ಯವನ್ನೂ ಮತ್ತು ಗಮಲಿಯೇಲನು ನನಗೆ ಕಲಿಸಿದ ಎಲ್ಲ ತಂತ್ರಗಳನ್ನೂ ನಾನು ಬಳಸಿದೆನು, ಆದರೆ ಸ್ತೇಫನನು ಇನ್ನೂ ನನ್ನನ್ನು ಹೊಡೆಯುತ್ತಲೇ ಇದ್ದನು!")

ಒಂದು ವೇಳೆ ಅವರು ಸ್ತೇಫನನನ್ನು ಆತನ ಮಾತುಗಳಿಂದ ಸುಮ್ಮನಾಗಿಸದೇ ಹೋದರೆ, ಕೆಲವರು ಇನ್ನೊಂದು ಮಾರ್ಗವನ್ನು, ಹೇಗೋ, ಯಾವುದೇ ಮಾರ್ಗವನ್ನು ಕಂಡುಕೊಳ್ಳುವುದಂತೂ ಖಚಿತ![21] "ಆಗ ಅವರು ಕೆಲವು ಮನುಷ್ಯರಿಗೆ ಇವನು ಮೋಶೆಗೆ ವಿರೋಧವಾಗಿಯೂ[22] ದೇವರಿಗೆ ವಿರೋಧವಾಗಿ ದೂಷಣೆಯ ಮಾತುಗಳನ್ನಾಡುವುದನ್ನು ಕೇಳಿದೆವೆಂದು ಹೇಳಿರಿ ಎಂಬುದಾಗಿ (ರಹಸ್ಯವಾಗಿ) ಪ್ರಚೋದಿಸಿದರು" (ವಚನ 11) "ಪ್ರಚೋದಿಸು" ಇದರ ಗ್ರೀಕಪದದ ಭಾಷಾಂತರದ ಅಕ್ಷರಸಹ ಅರ್ಥವು "ಕೆಳಗೆ ಎಸೆ" ಎಂದಾಗಿದೆ. "ಸ್ತೇಫನನ" ವೈರಿಗಳು ಮೋಸದ ಪದ್ಧತಿಗಳನ್ನು ಬಳಸಿದರು ಮತ್ತು ಹಣವೂ ಸಹ *ಲಂಚದೋಪಾದಿಯಲ್ಲಿ* ಸಾಗುತ್ತಿತ್ತು ಎಂಬುದಂತೂ ನಿಸ್ಸಂಶಯ; ಇವು ಲಂಪುಟತನವು ಇತ್ತೆನ್ನುವುದಕ್ಕೆ ಇರುವ ಸಾಕ್ಷಿಗಳು.

ಪೇತ್ರನ ಮತ್ತು ಇತರ ಅಪೊಸ್ತಲರ ಹಿಂದಿನ ಸಂಕಟಗಳನ್ನು ನಾವು ನೋಡುವಾಗ, ಯೇಸುವನ್ನು ನಿಂದಿಸಲು ಇದೇ ರೀತಿಯ ತಂತ್ರಗಳನ್ನು ಬಳಸಲಾಗಿತ್ತು. ಸ್ತೇಫನನು ನ್ಯಾಯಮಂಡಲಿಯ ಮುಂದೆ ತರಲ್ಪಟ್ಟದ್ದೂ ಸಹ ಇದೇ ತರದ ಪ್ರಕರಣವಾಗಿತ್ತ ಅದೂ ಸ್ತೇಫನನ ವೈರಿಗಳಂತೆ, "ಕ್ರಿಸ್ತನ ವೈರಿಗಳು" "ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸುಳ್ಳುಸಾಕ್ಷಿಯನ್ನು ಹುಡುಕಿದರು" (ಮತ್ತಾಯ 26:59). ಆತನ ಮಾತುಗಳನ್ನು ತಿರುಚುವ ಪರಿಣಾಮದಿಂದ ಸ್ತೇಫನನ ವಿರುದ್ಧವಿದ್ದ ಎಲ್ಲಾ ಆಪಾದನೆಗಳು ಎಲ್ಲವು ಸುಳ್ಳಾಗಿದ್ದವು (ನೋಡಿರಿ 6:13). ಮೋಶೆಯ ಧರ್ಮಶಾಸ್ತ್ರವನ್ನು ಕೈಕೊಳ್ಳುವುದರ ಮೂಲಕ ಯಾವನೊಬ್ಬನೂ ರಕ್ಷಿಸಲ್ಪಡುವುದಿಲ್ಲ ಎಂದು ಆತನು ಕಲಿಸಿದನು, ಆದರೆ ಇದು ಮೋಶೆಗೆ *ವಿರೋಧವಾಗಿ* ಮಾತನಾಡಿದ್ದು ಅಲ್ಲ. ಮತ್ತು ಬಹು ನಿಶ್ಚಿತವಾಗಿ ಆತನು ಎಂದಿಗೂ ದೇವರ ವಿರುದ್ಧವಾಗಿಯೂ ಮಾತನಾಡಲಿಲ್ಲ!

ಹೇಗೋ, ಸ್ತೇಫನನ ವಿರುದ್ಧವಾಗಿರುವ ಜನಪ್ರೀಯ ಅಭಿಪ್ರಾಯವನ್ನು ತಿರುಗಿಸಿಕಟ್ಟಲು ಈ ದೋಷಾರೋಪಣೆಗಳು ಸಾಕಷ್ಟಿದ್ದವು. "ಅವರು ಜನರನ್ನೂ ಹಿರಿಯರನ್ನೂ ಶಾಸ್ತ್ರಿಗಳನ್ನೂ ರೇಗಿಸಿದರು"[23] (ವಚನ 12ಎ). ಹೀಗಿರಲಾಗಿ, ಪುನರುತ್ಥಾನವನ್ನು ಬೋಧಿಸುವುದರಿಂದ ಸದ್ದುಕಾಯರು ಕ್ರೈಸ್ತರನ್ನು ದ್ವೇಷಿಸುತ್ತಿದ್ದರು. ಕ್ರಿಸ್ತನ ಹಿಂಬಾಲಕರು ಯೆಹೂದಿ ಸಮುದಾಯಕ್ಕೆ ಸಂಪೂರ್ಣ[24] ಗೌರವವನ್ನು ತೋರುವಲ್ಲಿ ಆನಂದಿಸುತ್ತಿದ್ದರು. ಆದರೆ ಈಗ ಪರಿಸ್ಥಿತಿಯು ಬದಲಾಯಿತು:[25] "ಮತ್ತು ಅವರು ಆತನ ಮೇಲೆ ಏರಿ ಬಂದರು ಆತನು ಬೋಧಿಸುತ್ತಾ ಮತ್ತು ಸ್ವಸ್ಥಮಾಡುತ್ತಾ ಇರುವಂಥ ಸಮಯದಲ್ಲಿ; ನೋಡಿರಿ 6:8, 10 ಆತನ ಮೇಲೆ ದೋಷಾರೋಪಣೆ ಹೊರಿಸಿ[26] ಅವನನ್ನು ಹಿಡಿದು ಹಿರಿ ಸಭೆಗೆ ಕರೆದುಕೊಂಡು ಹೋದರು" (ವಚನ 12ಬಿ).

## ಸತ್ಯಕ್ಕೆ ತಕ್ಕದಾದ ಸಮರ್ಥನೆ (6:13-7:53)

ಮತ್ತೊಂದಾವರ್ತಿ ಯೇಸುವಿನ ಹಿಂಬಾಲಕರು ಬಲಶಾಲಿಯಾದ ಸಭಾಮಂದಿರದ[27] ಮುಂದೆ ನಿಂತರು. ಸ್ತೇಫನನನ್ನು ಆ ಸ್ಥಳಕ್ಕೆ ಎಳೆದ ಜನರು ಸಮಯವನ್ನು ಹಾಳು ಮಾಡದೇ ತಮ್ಮ ಸಾಕ್ಷಿಯ ನಿಲುವನ್ನು ಪ್ರತಿಪಾದಿಸಿದರು:

> ಹಿರಿಸಭೆಗೆ ತೆಗೆದುಕೊಂಡು ಹೋಗಿ ಸುಳ್ಳುಸಾಕ್ಷಿಗಳನ್ನು ಕರೆತಂದು ನಿಲ್ಲಿಸಿದರು. ಆ ಸಾಕ್ಷಿಗಳು - "ಈ ಮನುಷ್ಯನು ಈ ಪರಿಶುದ್ಧವಾದ ಸ್ಥಳಕ್ಕೆ ವಿರೋಧವಾಗಿಯೂ ಧರ್ಮಶಾಸ್ತ್ರಕ್ಕೆ ವಿರೋಧವಾಗಿಯೂ ಮಾತಾನಾಡುವುದನ್ನು ಬಿಡುವುದೇ ಇಲ್ಲ. ಆ ನಜರೇತಿನ ಯೇಸು ಈ ದೇವಾಲಯನ್ನು ಕೆಡವಿ ಮೋಶೆ ನಮಗೆ ನೇಮಿಸುವ ಆಚಾರಗಳನ್ನು ಬೇರೆ ಮಾಡುವನೆಂಬುದಾಗಿ ಇವನು ಹೇಳುವುದನ್ನು ನಾವು ಕೇಳಿದ್ದೇವೆ ಅಂದರು"[28] (6:13, 14).

ಒಂದು ಸಂಗತಿಯನ್ನು ಅವರು ಸರಿಯಾಗಿ ತಿಳಿದಿದ್ದರು: ಸ್ತೇಫನನು ತಾನು ಪ್ರೀತಿಸಿದ ಯೇಸುವಿನ ಬಗೆಗೆ "ನಿರಂತರವಾಗಿ ಮಾತನಾಡಿದ್ದರಲ್ಲಿ" ಯಾವುದೇ ಸಂಶಯವಿಲ್ಲ! ಇನ್ನುಳಿದವುಗಳಲ್ಲಿ ಯೇಸುವಿನ ಮಾತುಗಳನ್ನು (ಸ್ತೇಫನನಿಂದ ವ್ಯಾಖ್ಯಾನಿಸಲ್ಪಟ್ಟಂಥವುಗಳು) ಬುದ್ಧಿಪೂರ್ವಕವಾಗಿ ತಪ್ಪಾದ ರೀತಿಯಲ್ಲಿ ಬಳಸಿದ್ದಾಗಿದೆ. ಅವರು ಸಂಪ್ರದಾಯಗಳನ್ನು ಅನುಸರಿಸುವುದಕ್ಕಾಗಿ ದೇವರ ಆಜ್ಞೆಯನ್ನು ಮೀರಿದರು *ಎಂದು* ಯೇಸು ಹೇಳಿದ್ದನು (ಹೋಲಿಸು ಮತ್ತಾಯ 15:3). ದೇವಾಲಯವು ಕೆಡವಲ್ಪಡುವದು *ಎಂದೂ* ಯೇಸುವು ಹೇಳಿದನು (ಮತ್ತಾಯ 24:1, 2).[29] ಆದರೆ ಯೇಸುವು ಎಂದಿಗೂ ಆತನು ದೇವಾಲಯನ್ನು ನಾಶಮಾಡುವುದಾಗಿ ಹೇಳಲಿಲ್ಲ, ಅಲ್ಲದೇ ಮೋಶೆಯಿಂದ ಮೂಲತವಾಗಿ ಬಂದ ಯಾವುದೇ ಬೋಧನೆಗಳ ವಿರುದ್ಧವಾಗಿ ಆತನು ಮಾತನಾಡಲಿಲ್ಲ.

ನ್ಯಾಯಮಂಡಳಿಯಲ್ಲಿ ಕೊಡಲಾದ ಗಂಭೀರವಾದ ಆರೋಪಗಳ ನಂತರ, ಆತನು ಹೇಗೆ ಪ್ರತಿಕ್ರಯಿಸುತ್ತಾನೆ ಎಂಬುದನ್ನು ಕುತೂಹಲದಿಂದ ನೋಡಲು ನಾವು ತಿರುಗುತ್ತೇವೆ (ಬಹುಶಃ ಅಲ್ಲಿ ಆತನ ಮುಖದಲ್ಲಿ ಏನಾದರೂ ತಪ್ಪು ಕಂಡುಬರುತ್ತದೇನೋ ಎಂಬ ನಿರೀಕ್ಷೆಯಿಂದ ನೋಡುತ್ತೇವೆ). ಮಂಡಳಿಯಲ್ಲಿ ಸ್ತೇಫನನ ವಿರುದ್ಧ ಮಾಡಿದ ಎಲ್ಲಾ ಆಪಾದನೆಗಳನ್ನು "ಅವರ ದೃಷ್ಟಿಯನ್ನು ಅವನ ಮೇಲೆ ಕೇಂದ್ರೀಕರಿಸುವಂತೆ" ಮಾಡಿತು. ಅವರು ಏನನ್ನು ನೋಡಲುಬಯಸಿದ್ದರು? ಆ ಮನುಷ್ಯನು ದೋಷಿಯಾಗಿ ಕಾಣುತ್ತಾನೆಯೇ? ಆ ಮನುಷ್ಯನು ಭಯಹುಟ್ಟಿಸುವಂತವನೇ? ಆ ಮನುಷ್ಯನು ಹೆದರಿದವನಂತೆ ಕಾಣುತ್ತಾನೆಯೇ? ಅವರು ಏನನ್ನು ನಿರೀಕ್ಷಿಸಿದ್ದರೋ ಅದನ್ನು ಕಾಣದೆ ಅವರು ಇನ್ನೊಂದನ್ನು ಕಂಡರು. "ಆಗ ಹಿರೀ ಸಭೆಯಲ್ಲಿ ಕೂತಿದ್ದವರೆಲ್ಲರೂ ಅವನನ್ನು ದೃಷ್ಟಿಸಿ ನೋಡಿ ಅವನ ಮುಖವು ದೇವದೂತನ ಮುಖದಂತೆ ಇರುವುದನ್ನು ಕಂಡರು" (6:15). ಇದರ ಅರ್ಥವು ಆತನು ಶಾಂತನು ಮತ್ತು ಭರವಸಯುಕ್ತನಾಗಿದ್ದನೇ? ಇದರ ಅರ್ಥ ಮೋಶೆಯು ಬೆಟ್ಟದಿಂದ ಇಳಿದು ಬಂದಾಗ ಆತನ ಮುಖವು ಕಂಡ ಹಾಗೆ ದೇವರ ಕೃಪೆಯು ಆತನ ಮುಖದಲ್ಲಿ ತೋರಿಬಂತೇ? (ವಿಮೋಚನಕಾಂಡ 34:29) ಅಥವಾ ರೂಪಾಂತರವಾದ ಬೆಟ್ಟದಲ್ಲಿ ಯೇಸುವಿನ ಮುಖವು ಇದ್ದಹಾಗೆ (ಮತ್ತಾಯ 17:2) ಇತ್ತು ಎಂದು ಇದರ ಅರ್ಥವೇ?[30] ಇದನ್ನು ನಾವು ಬಲ್ಲವರಾಗಿದ್ದೇವೆ: ಭಯಗ್ರಸ್ತನಾದ ಆಪಾದಿತನ ಬದಲಾಗಿ ಅವರು ರೂಪಾಂತರಿತನಾದ ಕ್ರೈಸ್ತನನ್ನು ಕಂಡರು!

ಮಾಹಾಯಾಜಕರು[31] ಸ್ತೇಫನನಿಗೆಮಾಡಲ್ಪಟ್ಟ ಆಪಾದನೆಗಳು ಯೋಗ್ಯವೋ ಅಲ್ಲವೋ? ಎಂದು ಕೇಳಿದನು (7:1) ನಿಯಮದ ಪ್ರಕಾರ, ಸ್ತೇಫನನಿಗೆ ಉತ್ತರ ಕೊಡುವದು ಅವಶ್ಯವಿರಲಿಲ್ಲ. ಉತ್ತರಕೊಡುವುದರಿಂದ ಆಗುವ ಅಪಾಯವನ್ನು ಆತನು ಬಲ್ಲವನಾಗಿದ್ದನು. ಅಪೊಸ್ತಲರಂತೆ, ಹೇಗೋ, ಆತನು ಬೋಧಿಸುವ ಪ್ರತಿಯೊಂದೂ ಅವಕಾಶವನ್ನು, ಮಾನವರ ಆತ್ಮವನ್ನು ರಕ್ಷಿಸುವುದಕ್ಕೆ ಆತನು ಬಳಿಸಿಕೊಂಡನು.

ಸ್ತೇಫನ ಸಮರ್ಥನೆಯು - 7:2-53ರಲ್ಲಿನ - ಬೋಧನೆಯಲ್ಲಿ ಕಂಡುಬರುತ್ತದೆ. ಸ್ತೇಫನು ತನ್ನ ವಿರುದ್ಧ ಮಾಡಿದ ಆಪಾದನೆಗಳನ್ನು ಖಂಡಿತವಾಗಿ ಸಮರ್ಥಿಸಿಕೊಂಡನು ಆದರೆ ಆಪಾದಿತನು ತಾನಲ್ಲ ಆಪಾದಿತರು ಅವರು ಎಂದು ಅವರಿಗೆ ಮನಗಾಣಿಸಲು ಯತ್ನಿಸಿದನು. ಆದರೆ ಆತನ ವಿರುದ್ಧವಾಗಿ ಆಪಾದನೆ ಮಾಡುವವರೇ ಸ್ವತ ದೋಷಿಗಳಾಗಿದ್ದರು ಎಂಬುದಾಗಿ ತಿಳಿಸಿಕೊಟ್ಟನು. ಪಶ್ಚಾತ್ತಾಪಪಟ್ಟು ದೇವರೆಡೆಗೆ ತಿರುಗಿಕೊಳ್ಳಬೇಕಾದವರು ಅವರಾಗಿದ್ದರು ಹೊರತು ಆತನಲ್ಲ! ಆ ಬೋಧನೆಯನ್ನು ನಮ್ಮ ಮುಂದಿನ ಪಾಠದಲ್ಲಿ ವಿವರವಾಗಿ ಕಲಿಯೋಣ; ಈಗ, ಮನ ಕಲಕುವಂತಹ ಸಮಾರೋಪವನ್ನು ಗಮನಿಸೋಣ:

> "ಚಂಡಿಗಳೇ, ಮನಶ್ಶುದ್ಧಿಯೂ ಕರ್ಣಶುದ್ಧಿಯೂ ಇಲ್ಲದವರೇ, ನಿಮ್ಮ ಪಿತೃಗಳು ಹೇಗೋ ಹಾಗೆಯೇ ನೀವೂ ಯಾವಾಗಲೂ ಪವಿತ್ರಾತ್ಮನನ್ನು ಎದುರಿಸುವವರಾಗಿದ್ದೀರಿ. ಪ್ರವಾದಿಗಳಲ್ಲಿ ನಿಮ್ಮ ಪಿತೃಗಳುಹಿಂಸೆಪಡಿಸದವರು ಯಾರಿದ್ದಾರೆ? ಅವರು ಆ ರೀತಿ ಸ್ವರೂಪನ ಆಗಮನದವಿಷಯದಲ್ಲಿ ಮುಂತಿಳಿಸಿದವರನ್ನು ಕೊಂದರು, ನೀವು ಈಗ ಆತನನ್ನು ಹಿಡುಕೊಟ್ಟು ಕೊಂದವರಾದಿರಿ ..." (7:51-53).

ಸ್ತೇಫನನು ಈ ಮಾತುಗಳನ್ನು ಮಾತಾನಾಡುತ್ತಿರುವಾಗ, ತಾನು ಗಂಡಾಂತರವನ್ನು ಎದುರುಹಾಕಿಕೊಳ್ಳುತ್ತಿದ್ದೇನೆಂದು ಆತನು ತಿಳಿದಿದ್ದನು. ಆತನ ಮಾತುಗಳು ಪುನರುಜ್ಜೀವನ ವಾಗಲಿ ಅಥವಾ ತಿರಸ್ಕರಿಸುವಿಕೆಯಾಗಲಿ, ಬಿಡುಗಡೆಯಾಗಲೀ ಅಥವಾ ಮರಣವಾಗಲೀ, ರಕ್ಷಣೆಯಾಗಲೀ ಅಥವಾ ಕಲ್ಲೆಸುಯುವಿಕೆಯಾಗಲೀ ಇಂಥ ಪರಿಣಾಮಗಳನ್ನು ಬೀರಲು ಸಾಧ್ಯವಾಗಿದ್ದವು.

## ಮರಣಹೊಂದುವದಕ್ಕೂ ಯೋಗ್ಯವಾದ ನಂಬಿಕೆ (7:54-60)

ಅಲ್ಲಿ ಯಾವ ಪುನರುಜ್ಜೀವನವು ಇರಲಿಲ್ಲ. ವಚನ 54 ತಿಳಿಸುವುದೇನೆಂದರೆ, "ಈ ಮಾತುಗಳನ್ನು ಕೇಳಿ ಅವರು ರೌದ್ರಮನಸ್ಸುಳ್ಳವರಾದರು. ..." "ರೌದ್ರಮನಸ್ಸುಳ್ಳವರಾಗಿ" ಇದೇ ಪದಪುಂಜದ 5:33ರಲ್ಲಿ ಸಿಕ್ಕುವದು, ಗಮಲಿಯೇಲನ ಮಧ್ಯಪ್ರವೇಷಿಸುವಿಕೆಗಿಂತ ಮುಂಚೆ ಮಂಡಲಿಯು ಅಪೊಸ್ತಲರನ್ನು ಕೊಲ್ಲಲು ಸಿದ್ಧವಾಗಿತ್ತು. ಇದರ ಅಕ್ಷರಸಹ ಅರ್ಥವು "ಅವರ ಹೃದಯವು ಗರಗಸಗಳಾಗಿದ್ದವು" ಚೂಪಾದ ಗರಗಸದಂತಿತ್ತು. ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಡುವ ಬದಲಾಗಿ "ಅವರು ರೌದ್ರತೆಯುಳ್ಳವರಾದರು" (NIV) "ಮತ್ತು ಅವರು ಅವನ ಮೇಲೆ ಹಲ್ಲುಕಡಿದರು" (ವಚನ 54ಬಿ). ಅವರು ಕೋಪದಲ್ಲಿ, ತಮ್ಮ ದವಡೆಯನ್ನು ಎಷ್ಟು ಗಟ್ಟಿಯಾಗಿ ಭದ್ರವಾಗಿ ಹಿಡಿದಿದ್ದರೆಂದರೆ ಅವರ ಹಲ್ಲುಗಳು ಒಂದರ ವಿರುದ್ಧ ಒಂದು ಪ್ರತಿಯೊಂದು ಅರೆಯತೊಡಗಿದವು.[32] (ಹಲ್ಲು ಕಡಿದರು ಈ ಪದವು ಸಾಮಾನ್ಯವಾಗಿ ನರಕದ ಶಿಕ್ಷೆಗೆ ಸಂಬಂಧಪಟ್ಟಂತೆ ಬಳಸಲ್ಪಡುವುದಾಗಿದೆ. ಮಂಡಳಿಯ ವರ್ತನೆಯು ಹೇಗಿತ್ತೆಂದರೆ ಅವರನ್ನು ನಿತ್ಯತ್ವದ ಬೆಂಕಿಗೆ ಯೋಗ್ಯರನ್ನಾಗಿ ಮಾಡಿರಬೇಕು ಎಂದು ಲೂಕನು ಸೂಚಿಸುವವನಾಗಿರಬಹುದು![33])

ಈ ಸಮಯದಲ್ಲಿ ಯಾವ ಗಮನಿಯೇಲನೂ ದ್ವೇಷದ ದಳ್ಳುರಿಯನ್ನು ತಣ್ಣಗೆ ಮಾಡಲು ಮಾತನಾಡಲಿಲ್ಲ.[34] ಸ್ತೇಫನನ ಸುತ್ತಲೂ ನಿಂತಿದ್ದ ಆವೇಷಭರಿತವಾದ ಜನಜಂಗುಳಿಯನ್ನು ನೋಡಿದನು, ಮತ್ತು ತನ್ನ ಸಾವು ಸಮೀಪವಿದೆ ಎಂದು ಆತನು ತಿಳಿದಿರಲಿಕ್ಕೆ ಸಾಕು. ಇದೊಂದು ಅಪೂರ್ವವಾದ ಗಳಿಗೆಯಾಗಿತ್ತು. ಇದು ಕೇವಲ ಭೂಮಿಗೆ ಮಾತ್ರ ಸಂಬಂಧಿತ ವಾಗಿರಲಿಲ್ಲ, ಪರಲೋಕಕ್ಕೂ ಕೂಡಾ - ದೇವರು ಸ್ತೇಫನನಿಗೆ ಈ ಸಂಕಟವನ್ನು ತಾಳಿಕೊಳ್ಳಲು ವಿಷೇಶವಾದ ದರ್ಶನವನ್ನು ಕೊಟ್ಟನು.[35] ಸ್ತೇಫನನ ದೃಷ್ಟಿಯಲ್ಲಿ ದ್ವೇಷದ ಛಾಯೆಯಿಂದ ತುಂಬಿದ ವಿಕಾರವಾದ ಮುಖಗಳು ಕ್ಷೀಣವಾಗಲು ಪ್ರಾರಂಭಿಸಿದವು. ಬದಲಾಗಿ ಪ್ರೀತಿಯ ಪ್ರವಾಹದಿಂದ ತುಂಬಿದ ಸುಂದರ ಮುಖವನ್ನು ಆತನು ಕಾಣುವಂತವನಾದನು.

"ಆದರೆ ಪವಿತ್ರಾತ್ಮಭರಿತನಾಗಿ ಆಕಾಶದ ಕಡೆಗೆ ದೃಷ್ಟಿಸಿ ನೋಡಿ ದೇವರ ಪ್ರಭಾವವನ್ನೂ ದೇವರ ಬಲಗಡೆಯಲ್ಲಿ ನಿಂತಿರುವ ಯೇಸುವನ್ನೂ ಕಂಡು" (7:55) ಯೇಸು ಪರಲೋಕಕ್ಕೆ ಹಿಂತಿರುಗಿದ ಮೇಲೆ, ಆತನು ದೇವರ ಬಲಗಡೆಯಲ್ಲಿ ಆಸೀನನಾದನು (ಮಾರ್ಕ 16:19; ನೋಡಿರಿ ಕೀರ್ತನೆ 110:1, 4; ಇಬ್ರಿಯ 1:13; 8:1, 2 ಸಹ ನೋಡಿರಿ). ಈಗ ಹೇಗೋ, ಆತನು ತನ್ನ ನಂಬಿಕೆಗಾಗಿ ಮರಣಕ್ಕೆ ಸಿದ್ಧನಾದ ಈ ವ್ಯಕ್ತಿಗಾಗಿ ಗೌರವಪೂರ್ವಕವಾಗಿ ಎದ್ದು ನಿಂತಿದ್ದಾನೆ.[36]

ಸ್ತೇಪನನು "ಅಗೋ ಆಕಾಶವು ತೆರೆದಿರುವುದನ್ನೂ ಮನುಷ್ಯಕುಮಾರನು[37] ದೇವರ ಬಲಗಡೆಯಲ್ಲಿ ನಿಂತಿರುವುದನ್ನೂ ನೋಡುತ್ತೇನೆ ಎಂದು ಹೇಳಿದನು" (7:56). ಯೇಸುವಿನ ಸಂಕಟಗಳ ಆರಂಭದ ದಿನಗಳಲ್ಲಿ ಮಹಾಯಾಜಕರು ಯೇಸುವಿಗೆ "ನೀನು ಕ್ರಿಸ್ತನೋ, ಆಶೀರ್ವದಿಸಲ್ಪಟ್ಟ ಮಗನು ನೀನೋ" ಎಂದು ಕೇಳಿದರು. ಆಗ ಯೇಸು "ನಾನೇ ಆಗಿದ್ದೇನೆ; ಮತ್ತು ಮನುಷ್ಯಕುಮಾರನು ದೇವರ ಬಲಗಡೆಯಲ್ಲಿ ಕೂತಿರುವುದನ್ನು ನೀವೇ ನೋಡುವಿ" ಎಂದು ಉತ್ತರಿಸಿದನು. "ಇದನ್ನು ಕೇಳಿದ ಮಾಹಾಯಾಜಕನು ತನ್ನ ನಿಲುವಂಗಿಯನ್ನು ಹರಿದುಕೊಂಡು ಕೂಗುತ್ತಾ, ಇದಕ್ಕಿಂತ ಹೆಚ್ಚಿನ ಸಾಕ್ಷಿ ನಮಗೇಕೆ ಬೇಕು? ದೇವದೂಷಣೆಯ ಮಾತುಗಳನ್ನು ನೀವು ಕೇಳಿದಿರಲ್ಲಾ ಎಂದು ಕೂಗಿದನು'' (ಮಾರ್ಕ 14:61-63)! ಯೇಸು ತಾನು ದೇವರ ಬಲಗಡೆಯಲ್ಲಿ ಇರುವುದಾಗಿ ಪ್ರತಿಪಾದಿಸಿದ್ದು ದೇವದೋಷಣೆ ದೋಷವಾಗಿದ್ದರೆ, ಸ್ತೇಫನನೂ, ಸಹ ಯೇಸು ದೇವರ ಬಲಗಡೆಯಲ್ಲಿದ್ದಾನೆಂದು ಹೇಳುವುದು ಕೂಡಾ ದೇವದೂಷಣೆಯ ಮಾತಾಗಿದೆ![38]

ಸ್ತೇಫನನು ಯೇಸುವನ್ನು ನೋಡಿದೆ ಎಂದು ಅಧಿಕಾರಯುಕ್ತವಾಗಿ ಹೇಳುವದು ಕೊನೆಯ ಹಂತವಾಗಿತ್ತು![39] ಚೀರಾಡುವಿಕೆಯು ಅವರ ಧ್ವನಿಯನ್ನು ತಾರಕ್ಕೇರಿಸಿತ್ತು (NIV) ತಮ್ಮ ನ್ಯಾಯಾಂಗದ ನಿಲುವಂಗಿಯಲ್ಲಿ ಘನತೆವೆತ್ತ ಮಂಡಳಿಯ ಸದಸ್ಯರು ಸ್ತೇಫನನ ಕೋಪಭರಿತ ಮಾತುಗಳನ್ನು ಕೇಳಲಾರದೆ ತಮ್ಮ ಕೈಗಳಿಂದ ಕಿವಿಗಳನ್ನು ಮುಚ್ಚಿಕೊಂಡು "ಆತನ ಮೇಲೆ ಒಟ್ಟಾಗಿ ಬಿದ್ದರು'' (7:57). ಇದು ಸನ್ಮಾನಯುತ USಗೆ ಹೆಚ್ಚು ಕಡಿಮೆ ಸಮವಾದುದು ಆಗಿದೆ. ಉನ್ನತ ನ್ಯಾಯಾಲಯದ ನ್ಯಾಯಾಧೀಶರು ತಮ್ಮ ಆಸನದಿಂದ ಜಿಗಿಯುವದು, ತಮ್ಮ ಹಿಂದಿನ ನಿಲುವಂಗಿಗಳಿಂದ ತಮ್ಮ ಸ್ತ್ರಗಳನ್ನು ತೆಗೆದುಕೊಳ್ಳುವದು, ತಮ್ಮ ಮುಂದಿರುವ ಆಪಾದಿತನನ್ನು ಕೊಲ್ಲುವದು![40] ಇದು ನಂಬಲು ಅಸಾಧ್ಯವಾದ ದೃಷ್ಯವಾಗಿತ್ತು!

ಮುಂದೆ ನಡೆದ ಸಂಗತಿಯು ರೋಮದ ನ್ಯಾಯಶಾಸ್ತ್ರ[41] ಮತ್ತು ಯೆಹೂದಿ ನ್ಯಾಯಶಾಸ್ತ್ರ[42] ಎರಡರ ಪ್ರಕಾರವೂ ಕಾಯಿದೆಬಾಹಿರವಾಗಿದ್ದು ಆಗಿದೆ. ಒಂದು ವೇಳೆ ಗಮಲಿಯೇಲನು ಮಂಡಳಿಯನ್ನು ಶಾಂತಗೊಳಿಸದಿದ್ದರೆ ಬಹುಶಃ ಆದಿ ಅಪೊಸ್ತಲರು ಹೀಗೆ ನಡೆಸಿಕೊಳ್ಳಲ್ಪಡುತ್ತಿದ್ದಿರಬಹುದು. "ಅವನನ್ನು ಊರಹೊರಕ್ಕೆ ನೂಕಿಕೊಂಡು ಹೋಗಿ ಕೊಲ್ಲುವದಕ್ಕೆ ಕಲ್ಲಸೆದರು'' (7:58ಎ). ಸ್ತೇಫನನನ್ನು ಸುಮ್ಮನಾಗಿಸಲಿಕ್ಕಾಗದೇ, ಅವರು ಅವನ ವಿರುದ್ಧವಾಗಿ ಸುಳ್ಳುಹೇಳಿದರು. ಅವನಿಗೆ ಸರಿಯಾಗಿ ಉತ್ತರಕೊಡಲಿಕ್ಕಾಗದೇ ಅವನನ್ನು ಕೊಂದರು. ಹೀಗೆ ತಪ್ಪು ಯಾವಾಗಲೂ ಸತ್ಯಕ್ಕೆ ಪ್ರತಿಕ್ರಿಯಿಸುವುದಾಗಿದೆ.

ಅವರ ನಡಾವಳಿಯಲ್ಲಿನ ಕೆಲ ನ್ಯಾಯಬದ್ಧತೆಯ ಕೆಲ ಅಂಶಗಳನ್ನು ಅವರು ಪರಿಪಾಲಿಸಿದರು. ಸ್ತೇಫನನನ್ನು ಧರ್ಮಶಾಸ್ತ್ರದ ವಿರುದ್ಧದ ನಿಂದನೆಗೆ ಒಳಪಡಿಸಿದರು, ಮತ್ತು ಧರ್ಮಶಾಸ್ತ್ರದ ವಿರುದ್ಧವಾಗಿ ಮಾತನಾಡುವದರ ಶಿಕ್ಷೆಯು ಕಲ್ಲೆಸೆಯುವುದೇ ಆಗಿತ್ತು (ಯಾಜಕಕಾಂಡ 24:10-23; ಧರ್ಮೋಪದೇಶಕಾಂಡ 13:6-11). ಆದ್ದರಿಂದ, ಅವರು ಆತನನ್ನು ಕಲ್ಲೆಸೆದು ಕೊಂದರು. ಯೆಹೂದಿ ಸಂಪ್ರದಾಯವು[43] ಹೇಳುವುದೇನೆಂದರೆಮರಣದ ಶಿಕ್ಷೆಯು ಊರೊಳಗೆ ನಡೆಯಕೂಡದು. ಆದ್ದರಿಂದ ಅವನನ್ನು ಯೆರೂಸಲೇಮಿನಿಂದ ಹೊರಗೆ ಎಳಕೊಂಡು ಹೋದರು (ಗಮನಿಸಿ 1 ಅರಸು 21:13). ಆ ದೂಷಣೆಗೆ ವಿರುದ್ಧವಾಗಿ

ಸಾಕ್ಷಿಯಾದವರು ಮೊದಲ ಕಲ್ಲನ್ನು ಎಸೆಯಬೇಕಿತ್ತು (ಧರ್ಮೋಪದೇಶಕಾಂಡ 17:7; ಗಮನಿಸಿ ಯೋಹಾನ 8:7). ಹೀಗೆ ನಾವು ಓದುತ್ತೇವೆ "ಸಾಕ್ಷಿಗಳು ತಮ್ಮ ಬಟ್ಟೆಗಳನ್ನು ತೆಗೆದು ..." (7:58ಬಿ) ಹೀಗೆ ಅವರ ಕೈಗಳು ಕಲ್ಲನ್ನು ಎಸೆಯುವುದಕ್ಕೆ ಬಿಡುವಾಗಿದ್ದವು.

ಅವರು ತಮ್ಮ ಬಟ್ಟೆಗಳನ್ನು "ಸೌಲನೆಂಬ ಯೌವನಸ್ಥನ[44] ಕಾಲುಗಳ ಬಳಿಯಲ್ಲಿ ಇಟ್ಟರು" (7:58ಸಿ). ಇಲ್ಲಿ ಮೊದಲ ಸಾರಿ ನಾವು ಸೌಲನ ಬಗೆಗೆ ಈತನ ಓದುತ್ತೇವೆ (ಮುಂದೆ ಪೌಲನು ಎಂದು ಗುರುತಿಸಲ್ಪಟ್ಟವನು), ಆದರೆ ಆತನು ಬಹುಶಃ ಸ್ತೇಫನ ನೊಂದಿಗಿನ ಗ್ರೀಕ್ ಭಾಷೆಯ ಸಭಾಮಂದಿರದಲಿನ್ಲ ಚರ್ಚೆಯಲ್ಲಿ ಪಾಲ್ಗೊಂಡಿದ್ದನು ಎಂದು ನಮಗೆ ಸೂಚಿಸಲ್ಪಟ್ಟಿದೆ. ಸ್ತೇಫನನ ವಿಚಾರಣೆಗಾಗಿ[45] ಆತನು ಮಂಡಳಿಯಲ್ಲಿ ಉಪಸ್ಥಿತನಿದ್ದನು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಮತ್ತು ಬಹುಶಃ ಸ್ತೇಫನನ ಮೇಲೆ ಕ್ರೂರಪ್ರಾಣಿಯ ಹಾಗೆ ಏರಿ ಹೊದವರಲ್ಲಿ ಈತನು ಒಬ್ಬನಾಗಿದ್ದನು. 8:1ರಲ್ಲಿ "ಸೌಲನು ಅವನ ಕೊಲೆಗೆ ಸಮ್ಮತಿಸುವವನಾಗಿದ್ದನು" ಎಂದು ನಾವು ಓದುತ್ತೇವೆ. ನಂತರ ಪೌಲನು ಪ್ರಾರ್ಥನೆಯಲ್ಲಿ "ಮತ್ತು ನಿನ್ನ ಸಾಕ್ಷಿಯಾದ ಸ್ತೇಫನನ ರಕ್ತವು ಚೆಲ್ಲಲ್ಪಟ್ಟಾಗ ನಾನೂ ಹತ್ತಿರ ನಿಂತು ಒಪ್ಪಿಕೊಂಡು ಅವನನ್ನು ಕೊಂದವರ ವಸ್ತ್ರಗಳನ್ನು ಕಾಯುತ್ತಿದ್ದೆನಲ್ಲಾ" ಅಂದನು (22:20).

ಸಾಕ್ಷಿಗಳು ಯಾಕೆ ತಮ್ಮ ವಸ್ತ್ರಗಳನ್ನು ಸೌಲನ ಮೇಲೆ ಬಿಟ್ಟರು ಉಳಿದವರ ಮೇಲೆ ಯಾಕೆ ಬಿಡಲಿಲ್ಲ? ಬಹುಶಃ ಸೌಲನು ಈ ಮರಣದಂಡನೆಯ ಮೇಲ್ವಿಚಾರಕನಾಗಿದ್ದನು ಎಂದು ಇದು ಸೂಚಿಸುತ್ತದೆ[46] ಬಹುಶಃ ಇದು ಕಾಕತಾಳೀಯವಾಗಿರಬಹುದು. ಸಾಕ್ಷಿಗಳು ಯಾಕೆ ತಮ್ಮ ಬಟ್ಟೆಗಳನ್ನು ಸೌಲನ ಪಾದಗಳ ಬಳಿ ಇಟ್ಟರು ಎಂಬುದು ನಿಶ್ಚಿತವಾಗಿ ನಮಗೆ ತಿಳಿಯದು, ಆದರೆ ಲೂಕನು ಇದನ್ನು ವಿವರವಾಗಿ ಯಾಕೆ ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದಾನೆ ಎಂದು ನಾವು ಹೀಗೆ ಊಹಿಸಬಹುದು: ಸೌಲನ ಹೇಗೆ ಪಾಲ್ಗೊಂಡಿದ್ದನು ಮತ್ತು ಪ್ರತಿಯೊಂದೂ ವಿವರಗಳು ಆತನ ಮನದಲ್ಲಿ ಅಳಿಸಲಾಗದೇ ಯಾಕೆ ಉಳಿದವು ಎಂಬುದನ್ನು ತೋರಿಸ ಲಾಗದು (22:20; ಹೋಲಿಸಿ 1 ತಿಮೊಥೆ 1:13).

ಕಲ್ಲೆಸೆಯುವದು ಭಯಂಕರವಾದ ಮರಣವಾಗಿದೆ. ಮಂಡಳಿಯು ಸ್ತೇಫನನನ್ನು ಕಲ್ಲೆಸೆಯುವ ಕಾಯಿದೆಬದ್ಧ ಸ್ಥಾನಕ್ಕೆ ಕರೆದೊಯ್ದದ್ದೇ ಆದರೆ, ಅವರು ಕಡಿದಾದ ಸ್ಥಳಕ್ಕೆ ದೊಬ್ಬಿಬಿಡುತ್ತಿದ್ದರು, ದೊಡ್ಡ ಬಂಡೆಯ ಕೆಳಗೆ ಹಾಕಿ ಅವನನ್ನು ಪುಡಿಮಾಡಿಬಿಡುತ್ತಿದ್ದರು ಮತ್ತು ನಂತರ ದೊಡ್ಡ ಕಲ್ಲುಗಳಿಂದ ಅವನ ಶ್ವಾಸವು ಅವನನ್ನು ಬಿಟ್ಟುಹೋಗುವವರೆಗೆ ಮತ್ತು ಅವನ ದೇಹವು ಮುರಿಯುವವರೆಗೆ ಅವರು ಕಲ್ಲಿನ ಮಳೆಯನ್ನು ಸುರಿಯುತ್ತಿದ್ದರು.[47] ಇದು ಜನಜಂಗುಳಿಯ ಕಾರ್ಯವಾಗಿದ್ದುದರಿಂದ, ಅವರು ಕೇವಲ ಆತನನ್ನು ಸುತ್ತುವರೆದಿರಬಹುದು ಮತ್ತು ತಮ್ಮ ಶಾಪಗಳೊಡನೆ ಕಲ್ಲುಗಳನ್ನು ಬೀಸಿರಬಹುದು.

ಪ್ರತಿಯೊಂದೂ ತಿರುಗುವ ಚಂಡಮಾರುತದ ಮಧ್ಯದಲ್ಲಿ ಎಲ್ಲವೂ ಶಾಂತವಾಗಿರುವ ಒಂದು "ಕಣ್ಣಿನೋಪಾದಿಯಲ್ಲಿ ಬಿಂದುವು" ಇರುತ್ತದೆ. ದ್ವೇಷಿಸುವವರು ಸುತ್ತಲೂ ಸುಳಿಯಂತೆ ಸುತ್ತಿಕೊಂಡಿರಲು ಸ್ತೇಫನನು ಶಾಂತನಾಗಿದ್ದರೂ. ಆತನ ಅಂತಿಮ ಕ್ಷಣಗಳು 7:59, 60ರಲ್ಲಿ ದಾಖಲಾಗಿದೆ:

> ಅವರು ಸ್ತೇಫನನ ಮೇಲೆ ಕಲ್ಲೆಸೆಯುತ್ತಾ ಇರಲು ಅವನು ಕರ್ತನ ಹೆಸರನ್ನು ಹೇಳಿ "ಯೇಸುಸ್ವಾಮಿಯೇ ನನ್ನಾತ್ಮವನ್ನು[48] ಸೇರಿಸಿಕೊ" ಎಂದು ಪ್ರಾರ್ಥಿಸಿ ಮೊಣಕಾಲೂರಿ[49] "ಕರ್ತನೇ ಈ ಪಾಪವನ್ನು ಅವರ ಮೇಲೆ ಹೊರಿಸಬೇಡವೆಂದು" ಮಹಾಶಬ್ಧದಿಂದ ಕೂಗಿದನು. ಇದನ್ನು ಹೇಳಿ ನಿದ್ರೆ ಹೋದನು.[50]

ಸ್ತೇಫನನಿಗೆ ತನ್ನ ಕೊಲೆಗಾರರಿಗಾಗಿ ತನ್ನ ತುಟಿಗಳಿಂದ ಪ್ರಾರ್ಥಿಸುತ್ತಾ ಸಾಯಲು ಹೇಗೆ ಸಾಧ್ಯವಾಯಿತು? ಆತನು "ತಂದೆಯೇ ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬುದನ್ನು

ಅರಿಯರು'' (ಲೂಕ 23:34) ಎಂದು ಶಿಲುಬೆಯ ಮೇಲೆ ಪ್ರಾರ್ಥಿಸಿದ ಆತ್ಮನನ್ನು ಗ್ರಹಿಸಿಕೊಂಡಿದ್ದನು, ಮತ್ತು ನಂತರ ತನ್ನ ಆತ್ಮವನ್ನು ದೇವರ ಕೈಗೆ ಒಪ್ಪಿಸಿಕೊಟ್ಟನು: "ತಂದೆಯೇ ನನ್ನ ಆತ್ಮನನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ'' (ಲೂಕ 23:46).[51] ಎಂದು ಕ್ರೂಜೆಯ ಮೇಲೆ ಪ್ರಾರ್ಥಿಸಿದ ಯೇಸುವಿನ ಆತ್ಮವನ್ನು ಅವನು ಹೊಂದಿಕೊಂಡಿದ್ದನು. ಸೌಲನಿಗೆ ಈ ದೃಷ್ಯವನ್ನು ಎಂದಿಗೂ ತನ್ನ ಮನದಿಂದ ಅಳಿಸಿಹಾಕಲಾರದೇ ಹೋಯಿತು. "ಸಭೆಯು ಪೌಲನ ಬೋಧನೆಗೆ ಸ್ತೇಫನನ ಪ್ರಾರ್ಥನೆಯು ಋಣಿಯಾಗಿದೆ ಎಂದು ಔಗುಸ್ತನು ಮುಂದೆ ಸೂಚಿಸಿದನು.''[52]

ಆ ಕ್ಷಣದಲ್ಲಿ, ಸ್ತೇಫನನ ರಕ್ತದ ರೋಷಾವೇಷದಿಂದ, ಸಭೆಯನ್ನು ನಾಶಮಾಡುವುದನ್ನು ಕಾರ್ಯರೂಪಕ್ಕೆ ತರುವಲ್ಲಿ ಸೌಲನು ಕಾಡುಮೃಗದಂತಾದನು.[53] ಸ್ತೇಫನನ ಮರಣದ ತದನಂತರದಲ್ಲಿ ನಡೆದ ಸಂಗತಿಗಳ ವಿವರಗಳನ್ನು ನಾವು ಹೀಗೆ ಓದುತ್ತೇವೆ:

> ಆ ದಿವಸದಲ್ಲಿ ಯೆರೂಸಲೇಮಿನಲ್ಲಿದ್ದ ಸಭೆಗೆ ದೊಡ್ಡ ಹಿಂಸೆ ಉಂಟಾಯಿತು ... ಮತ್ತು ಸೌಲನು ಮನೆಮನೆಗಳಲ್ಲಿ ಹೊಕ್ಕುಗಂಡಸರನ್ನೂ ಹೆಂಗಸರನ್ನೂ ಎಳೆದು ಕೊಂಡು ಬಂದುಸೆರೆಮನೆಗೆ ಹಾಕಿಸಿ ಸಭೆಯನ್ನು ಹಾಳುಮಾಡುತ್ತಿದ್ದನು (8:1ಬಿ, 3).

ಸ್ತೇಫನನು ಮೊದಲ ಕ್ರೈಸ್ತ ಹುತಾತ್ಮನಾಗಿದ್ದನು, ಆದರೆ ಅವನೇ ಕೊನೆಯವನಾಗಲಿಲ್ಲ.

## ಮುಕ್ತಾಯ

ಸ್ತೇಫನನು ತನ್ನ ನಂಬಿಕೆಗಾಗಿ ಸಾಯಲು ಸಿದ್ಧನಿದ್ದನು. ನಾನು ನಮ್ಮಲ್ಲಿನ ಪ್ರತಿಯೊಬ್ಬರಿಗೆ "ನಾನು ಯಾವುದಕ್ಕಾಗಿ ಸಾಯಲು ಸಿದ್ದನಿದ್ದೇನೆ?'' ಎಂದು ಕೇಳಲು ಬಯಸುತ್ತೇನೆ. ಜನರು ತಮ್ಮ ದೇಶಗಳಿಗಾಗಿ ಸಾಯುತ್ತಾರೆ. ಜನರು ತಮ್ಮ ಕುಟುಂಬಗಳಿಗಾಗಿ ಸಾಯುತ್ತಾರೆ. ಜನರು ತಾವು ನಂಬಿದವುಗಳಿಗಾಗಿ ಸಾಯುತ್ತಾರೆ. ದೇವರಿಗೆ ಸ್ತೋತ್ರವಾಗಲಿ, ಪ್ರಸ್ತುತ ದಿನಗಳಲ್ಲಿಯೂ ಸಹ ಸ್ತೇಫನನಂತಹ ಜನರು ಯೇಸುವಿನಲ್ಲಿನ ತಮ್ಮ ನಂಬಿಕೆಗಾಗಿ ಸಾಯಲು ಸಿದ್ಧರಾಗಿರುತ್ತಾರೆ. ನೀನು ನಂಬಿಕೆಗಾಗಿ ಸಾಯಲು ಬಯಸುತ್ತಿಯಾ?

ನೀನು ಈ ಪ್ರಶ್ನೆಯನ್ನು ಯೋಚಿಸುತ್ತಿರುವಂತೆ, ಇದನ್ನು ಗಣನೆಗೆ ತೆಗೆದುಕೋ: ನೀನು ನಿನ್ನ ನಂಬಿಕೆಗಾಗಿ ಜೀವಿಸದ ಹೊರತು ಅದಕ್ಕಾಗಿ ಎಂದಿಗೂ ಸಾಯಲಾರೆ. ಸ್ತೇಫನನ ಕ್ರೈಸ್ತನಂತಹ ಮನೋಭಾವನೆಯು ದೇಹಕ್ಕೆ ಕಲ್ಲುಗಳು ಬಂದು ಗುದ್ದುವಾಗ ತಕ್ಷಣವೇ ಬೆಳೆದು ಬಂದ ಸ್ವಭಾವ ಅದಲ್ಲ. ಆ ಗಳಿಗೆಗಿಂತ ಬಲು ಮುಂಚೆ, ಆತನು ತನ್ನ ಜೀವಿತವನ್ನು ಕರ್ತನಿಗೆ ಒಪ್ಪಿಸಿಕೊಟ್ಟಿದ್ದನು ಮತ್ತು "ಪರಿಶುದ್ದಾತ್ಮನಿಂದಲೂ ಮತ್ತು ಜ್ಞಾನದಿಂದಲೂ'' "ನಂಬಿಕೆಯಿಂದಲೂ'' ಮತ್ತು ಸಂಪೂರ್ಣ ಕೃಪೆಯಿಂದಲೂ ಮತ್ತು ಶಕ್ತಿಯಿಂದಲೂ ಕೂಡಿದವನಾಗಿದ್ದನು. ಆತನ ವಿಜಯಪೂರ್ವಕ ಮರಣವು ವಿಜಯಪೂರಿತ ಜೀವಿತದ ಛಾಯೆಯಾಯಿತು.

ನೀನು ನಿನ್ನ ಜೀವಿತವನ್ನು ಯೇಸುವಿಗೆ ಒಪ್ಪಿಸಿದ್ದೇಯಾ? ನೀನು ಈಗಲೇ ಸಾಯುವದಾಗಿದ್ದರೆ "ಕರ್ತನಾದ ಯೇಸುವೇ, ನನ್ನಾತ್ಮವನ್ನು ಒಪ್ಪಿಸಿಕೋ'' ಈ ಪ್ರಾರ್ಥನೆಯನ್ನು ಮಾಡಲು ಸಾಧ್ಯವೋ? ಮತ್ತು ಯೇಸು ತನ್ನ ತೆರೆದ ಕೈಗಳಿಂದ ನಿನ್ನನ್ನು ಬರಮಾಡಿಕೊಳ್ಳಲು ಸಿದ್ಧನಾಗಿದ್ದಾನೆ ಎಂಬುದನ್ನು ನೀನು ತಿಳಿದಿದ್ದಿಯೋ? ವಿಜಯದ ಕಿರೀಟವು (2 ತಿಮೊಥೆ 4:8; ಗ್ರಿಕ್ *stephanos*) ನಿನಗಾಗಿ ಸಿದ್ಧವಾಗಿದೆ, ಅಲ್ಲಿ ಸ್ತೇಫನನಿಗೋಸ್ಕರ ಇದ್ದಹಾಗೆ - ನೀನು ಒಂದು ವೇಳೆ ನಿನ್ನ ಜೀವಿತವನ್ನು ಸಂಪೂರ್ಣವಾಗಿ ಕರ್ತನಿಗೆ ಒಪ್ಪಿಸುವುದಾದರೆ. ದೇವರ ವಿಮೋಚಕನನ್ನು ತಿರಸ್ಕರಿಸಿ ಇಸ್ರಾಯೇಲರು ತಪ್ಪನ್ನು ಮಾಡಿದರು. ಆದರೆ ನೀನು ಕ್ರಿಸ್ತನನ್ನು ತಿರಸ್ಕರಿಸುವ ತಪ್ಪನ್ನು ಮಾಡಬೇಡ!

ಟಿಪ್ಪಣಿಗಳು

[1]ಸ್ತೇಪನನು ಯಾವ ಅದ್ಭುತಕಾರ್ಯಗಳನ್ನೂ ಸೂಚಕಕಾರ್ಯಗಳನ್ನೂ ಮಾಡಿದನೆಂದು ನಮಗೆ ಹೇಳಿಲ್ಲ. ಅವು ಅಪೊಸ್ತಲರು ಮಾಡಿದಂತೆಯೇ ಆದೇ ತರದವುಗಳಾಗಿರಬಹುದೆಂದು ನಾವು ಊಹಿಸಬಹುದು: ಸ್ವಸ್ಥಮಾಡುವದು ಮತ್ತು ದೆವ್ವಗಳನ್ನು ಬಿಡಿಸುವದು. ಆತನು ಪರೋಕ್ಷವಾಗಿ ಸ್ಫೂರ್ತಿಯ ಮೂಲಕ ಮಾತನಾಡುವ ವರವೂ ಕೂಡ ಹೊಂದಿದ್ದನು. [2]Lewis Foster, notes on Acts, *The NIV Study Bible* (Grand Rapids, Mich.: Zondervan Publishing House, 1985), 1654. [3]"ಕೃಪೆಯಿಂದತುಂಬಿದವನಾಗಿದ್ದನು" ಇದರ ಅರ್ಥವು ಸ್ತೇಪನನು ಕೃಪಾಪೂರಿತನಾದ ಮನುಷ್ಯನು, ಆತನ ಜನರ ಮನದಲ್ಲಿ ವಿಶ್ವಾದಿಂದ (ಕೃಪೆಯಿಂದ) ನಿಂತಿದ್ದನು, ಅಥವಾ ದೇವರ ಕೃಪೆಯು ಅವನ ಮೇಲೆ ವಿಶೇಶವಾದ ರೀತಿಯಲ್ಲಿ ನೆಲಸಿತ್ತು ಆತನು ಕೃಪಾಭರಿತನಾಗಿದ್ದನು (7:2); ಆತನು ಮೂಲತಹವಾಗಿ ಜನರಹೃದಯದಲ್ಲಿ ನಿಂತಿದ್ದನು; ಆದರೆ ನಂತರದ ಘಟನೆಗಳ ಬೆಳಕಿನಲ್ಲಿ ನೋಡುವಾಗ, ಬಹುಶಃ "ಸಂಪೂರ್ಣ ಕೃಪೆಯು ಮತ್ತು ಬಲದಿಂದ ತುಂಬಿದ ಮನುಷ್ಯನು" ಎಂಬ ವಚನದ ಈ ಭಾಗದ ಭಾಷಾಂತರವು ಬಹುಶಃ ಸರಿಯಾಗಿರಬೇಕು. [4]ನಮ್ಮಲ್ಲಿ ಪ್ರತಿಯೊಬ್ಬರಿಗೂ ಅವನ ಅಥವಾ ಅವಳ ಸ್ವಂತ ವಿಶೇಶ ಸೇವೆಯನ್ನು ಹುಡುಕುವದು ಅವಶ್ಯವಿದೆ - ವೈಶಿಷ್ಟಮಯವಾದ ನಮಗೆ ಯೋಗ್ಯವಾಗಿರುವ ಆ ವಿಷೇಶ ಕೆಲಸವು ಕರ್ತನ ಸಭೆಯಲ್ಲಿದೆ. ಒಂದು ವೇಳೆ ಪ್ರತಿಯೊಬ್ಬ ಸದಸ್ಯರು ಇದನ್ನು ಮಾಡಿದ್ದಾದರೆ, ಇದು ಕರ್ತನ ಕಾರ್ಯವನ್ನು ಕ್ರಾಂತಿಕಾರಕವಾಗಿ ಮಾಡುತ್ತದೆ! ಹೇಗೋ, ನಮಗೂ ನೆವವಾಗ ಬಳಸಬಾರದು. ನಮಗೆ ಇತರರ ಹಾಗೆ ವಿಷೇಶ ವರಗಳು ಕೊಡಲ್ಪಟ್ಟಿವೆ. ಉದಾಹರಣೆಗಾಗಿ, 8:1-4ನ್ನು ನಾವು ಗಮನಿಸುವಾಗ, ಪ್ರತಿಯೊಬ್ಬ ಕ್ರೈಸ್ತನು ದೇವವಾಕ್ಯವನ್ನು ಹಂಚುವುದನ್ನು ಪ್ರಾರಂಭಿಸಿದನು. ಅವ ರ್‍ಯಾರೂ ಸುವಾರ್ತಾಸೇವೆಯ ವಿಷೇಶ ವರವನ್ನು ಹೊಂದಿರಲಿಲ್ಲ ಎಂಬುದು ನನಗೆ ಖಚಿತವಾಗಿದೆ. [5]ಮನೆಗಳಲ್ಲಿಯೇ ಬೋಧನೆಯ ಕೂಟಗಳು ಜರಗುತ್ತಿದ್ದವು (2:46). [6]ಪದಕೋಶದಲ್ಲಿ ನೋಡಿ "ಸಭಾಮಂದಿರ." [7]ಒಬ್ಬ ಪ್ರಾಚೀನ ಬರಹಗಾರರು ಹೇಳುವಂತೆ ಯೆರೂಸಲೇಮು 480 ಸಭಾಮಂದಿರಗಳನ್ನು ಹೊಂದಿತ್ತು.ಅಪೊಸ್ತಲರ ಕೃತ್ಯಗಳು 6:9 ಸೂಚಿಸುವಂತೆ, ವಿಭಿನ್ನ ಸಾಂಸ್ಕೃತಿಕ ಹಿನ್ನಲೆಯನ್ನು ಹೊಂದಿದ ಅನೇಕ ಜನರಿಗೆ ಸ್ಥಳಾವಕಾಶ ಮಾಡಿಕೊಡಲು, ಜನರು ಬಲು ಹಿತಕರವಾಗಿರುವುದ್ಹಾಗಿ ಸ್ಥಳವನ್ನು ಒದಗಿಸಲೆಂದು ಅನೇಕ ಸಭಾಮಂದಿರಗಳು ಪಾರಂಭವಾದವು. ಪಂಡಿತರು ವಚನ 6ರಲ್ಲಿ ಪ್ರತಿ ಗುಂಪಿಗೆ ಒಂದಕ್ಕಿಂತ ಹೆಚ್ಚಿನ ಗ್ರೀಕಭಾಷೆಯ ಯೆಹೂದಿಗಳ ಸಭಾಮಂದಿರಗಳಿಗೆ ಹೋಗಿ ಯೇಸುಕ್ರಿಸ್ತನ ಕಥೆಯನ್ನು ಹೇಳಿರುವ ಸಾಧ್ಯತೆಯು ಇದೆ. ಮೂಲ ವೇದಭಾಗ ಮತ್ತು ಇಂಗ್ಲೀಷ ಭಾಷಾಂತರಗಳು ಎರಡರಲ್ಲೂ "ಸಭಾಮಂದಿರಕ್ಕೆ" ಏಕವಚನದಲ್ಲಿ ಬಳಸಲ್ಪಡುತ್ತಿದ್ದು, ಈ ಪಾಠವು ಕೇವಲ ಒಂದಕ್ಕೆ ಬಳಸಲ್ಪಟ್ಟುದ್ದಾಗಿದೆ. [8]ಯಲ್ಲಿ "ಲಿಬರ್ತಿನಿಯರು" ಎಂದಿದ್ದು ಇದರ ಮೂಲ ಅರ್ಥವು ಸ್ವಾತಂತ್ರ್ಯವನ್ನು ಪಡಕೊಂಡವರು ಎಂದಾಗಿದೆ, ಆದರೆ ಈ ದಿನ ನೈತಿಕಹತೋಟಿಯನ್ನು ಕಳಕೊಂಡಂತೆ ವರ್ತಿಸುವವರನ್ನು ಅವು ಸೂಚಿಸುವವುಗಳಾಗಿವೆ. "ಫ್ರೀಡಮ್ಯಾನ್" ಇದು ಸೂಚಿತವಾದ ಭಾಷಾಂತರವಾಗಿದೆ. [9]ಅವರು ಅಥವಾ ಅವರ ತಂದೆಗಳು ಗುಲಾಮಾರಾಗಿದ್ದರು. ಗಣನೀಯ ಸಂಖ್ಯೆಯ ಯೆಹೂದಿಗಳು ರೋಮ ದಂಡನಾಯಕನಾದ ಪಾಂಪೆಯಿಂದ ಸೆರೆಯಾಳುಗಳಾಗಿ ಬಂಧಿಸಲ್ಪಟ್ಟಿದ್ದು ನಂತರ ರೋಮಿನಲ್ಲಿ ಬಿಡುಗಡೆ ಮಾಡಲ್ಪಟ್ಟರು. ಇತರ ಯೆಹೂದಿ ಗುಲಾಮರು ಸಹ ಆ ವರ್ಷದೊಳಗೆ ಸ್ವತಂತ್ರ್ಯರಾದರು. [10]ಯೇಸುವಿನ ಶಿಲುಬೆಯನ್ನು ಹೊತ್ತುಕೊಂಡ ಯೋಹಾನನು ಕರೇನ ಪಟ್ಟಣದವನಾಗಿದ್ದನು (ಲೂಕ 23:26).

[11]ಈ ಸ್ಥಳಗಳಲ್ಲಿ ಪ್ರತಿಯೊಂದೂ ದೂರಕ್ಕೆ ತೆಗೆದುಹಾಕಲ್ಪಟ್ಟವು ಮತ್ತು (ಊಹಾತ್ಮಕ ವಾಗಿ) ಸಹಜವಾದುದರಲ್ಲಿ ಸ್ವಲ್ಪವನ್ನು ಹೊಂದಿತ್ತು, ಕೆಲವರು ಸೂಚಿಸುವುದೇನೆಂದರೆ ಒಂದು ದಕ್ಷಿಣ ಸಮುದ್ರದವರಿಗಾಗಿ ಮತ್ತು ಉತ್ತರ ಸಮುದ್ರದವರಿಗಾಗಿ; ಹೀಗೆ ಎರಡಾದರೂ ಸಭಾಮಂದಿರಗಳು ಅಲ್ಲಿ ಕಾಣಸಿಗುತ್ತಿದ್ದವು. ಎಲ್ಲರೂ ಸ್ವತಂತ್ರ್ಯ ಮನುಷ್ಯರಾಗಿದ್ದಾರೆ, ಅವರು ಸಾಮಾನ್ಯವಾದುದಕ್ಕಾಗಿ ಏನನ್ನಾದರೂ ಮಾಡುತ್ತಿದ್ದರು. [12]6:1ರ ಮೇಲಿನ ಟಿಪ್ಪಣಿಯನ್ನು ನೋಡಿರಿ. [13]ಕುರೇನ್ಯರ ಜನರು ಸುವಾರ್ತೆಯನ್ನು ಅಂತಿಯೋಕ್ಯಕ್ಕೆ ಒಯ್ದರು (11:20). ಅಪೋಲ್ಲೆಸನು ಅಲೆಕ್ಸಾಂಡ್ರೀಯದವನಾಗಿದ್ದನು (18:24). ಆಸ್ಯದ ಯೆಹೂದ್ಯರು ಸೌಲನ ಬಂಧನಕ್ಕೆ ಜವಾಬ್ದಾರರಾ ಗಿದ್ದರು (21:27; 24:18, 19). (ಅವರಲ್ಲಿ ಕೆಲವರು ಸ್ತೇಫನನಿಂದ ಅಡ್ಡಿಪಡಿಸಲ್ಪಟ್ಟವರಾಗಿರಬಹುದೋ?) [14]ಕೆಲವರು ಯೋಚಿ ಸುವುದೇನೆಂದರೆ ಸ್ತೇಫನನಿಂದ ಉತ್ತರಿಸಲೆಂದು ಸಭಾಮಂದಿರದ ನಾಯಕರಿಂದ ಸೌಲನು ಕರೆಯಲ್ಪಟ್ಟಿರಬೇಕು. ಕಿಲಿಕ್ಯದಿಂದ ಸ್ವಾಭಾವಿಕವಾದ ಪರಿಣಾಮವಾಗಿರುವಂತೆ ಸೌಲನು ಅಲ್ಲಿದ್ದನು ಎಂಬತೆ ಕಾಣುತ್ತದೆ. [15]ಸಭೆಯ ಆದಿಕಾಲದ ದಿನಗಳಲ್ಲಿ, ದೇವರು ತನ್ನ ಚಿತ್ತವನ್ನು ಅಲ್ಪವಾಗಿ (ಅಥವಾ ಬಹುವಾಗಿ) ಅವಶ್ಯವಿದ್ದಷ್ಟನ್ನು ಆ ದಿನಗಳಲ್ಲಿ ಬಿಡುಗಡೆಮಾಡಿದನು. ಅಧ್ಯಾಯ 10ರಲ್ಲಿ ಪೇತ್ರನಿಗೆ

ಕೊಡಲಾದ ದರ್ಶನವನ್ನು ಗಮನಿಸಿರಿ. ಅಂತಿಮವಾಗಿ, ಹೆಗೋ, ದೇವರು ತನ್ನ ದಿವ್ಯದರ್ಶನವನ್ನು ಸಂಪೂರ್ಣಗೊಳಿಸಿದನು (ಯೂದ 3). ನಾವು ಈ ದಿನ ಪ್ರಗತಿದಾಯಕದಿವ್ಯದರ್ಶನವನ್ನು ಹೊಂದಿಲ್ಲ. [16]ಸ್ತೇಫನನ ವಿರುದ್ಧದ ದೋಷಾರೋಪಣೆಯು ಆತನು ಮೋಶೆಯ ಮತ್ತು ದೇವರ ವಿರುದ್ಧ, ದೇವಾಲಯದ ಮತ್ತು ಧರ್ಮಶಾಸ್ತ್ರದ ವಿರುದ್ಧವಾಗಿ ಮಾತನಾಡುವುದು ಆಗಿತ್ತು ಎಂಬುದನ್ನು ಗಮನಿಸಿರಿ (6:11, 13, 14). ಆ ಆಪಾದನೆಗಳು ಸುಳ್ಳಾಗಿದ್ದವು, ಆದರೆ ಸುಳ್ಳಿಗೆ ಪರಿಣಾಮಕಾರಿಯಾದ ಸತ್ಯದ ಮೂಲದ ಅವಶ್ಯಕತೆಯಿದೆ. ಈ ಸುಳ್ಳುಗಳ ಜೊತೆಗೆ ಸ್ತೇಫನನ ಸಮರ್ಥನೆಗಳು ಅಧ್ಯಯ 7ರಲ್ಲಿದ್ದುದು ಸ್ತೇಪನು ಬೋಧಿಸುತ್ತಿರುವಂಥದ್ದು ಅಷ್ಟೊಂದು ಅಪರಿಚಿತವಾಗಿರಲಿಲ್ಲ ಎಂದು ನಮಗೆ ಸೂಚಿಸುವಂತದ್ದಾಗಿದೆ. [17]ಸ್ತೇಫನನ ಸಂದೇಶದ ವಿಷಯಕ್ಕೆ ಹೊಂದಿಕೊಂಡಂತೆ, ನಿಜ ಸಂಗತಿಯೆಂದರೆ ಅನೇಕ ಬೋಧಕರು ವಿಶ್ವಾಸಕ್ಕೆ ವಿಧೇಯರಾಗಿದ್ದರು (6:7). ಬಹುಶಃ ಇದು ಸಮಯದ ಗಂಭೀರತೆಗೆ ಪೂರಕವಾ ಗಿದೆ. [18]ಹಳೆಯ ಹಸ್ತಪ್ರತಿಗಳಲ್ಲಿ ಎಲ್ಲವೂ ದೊಡ್ಡ ಅಕ್ಷರ್ಥವಾದ ಸಣ್ಣ ಅಕ್ಷರಗಳು ಇದ್ದವು. ಹೀಗೆ ಅಲ್ಲಿ ಸ್ತೇಫನನ ಆತ್ಮವನ್ನೋ (ನೋಡಿ) ಅಥವಾ ಪರಿಶುದ್ಧ ಆತ್ಮನನ್ನು ಅಥೈರ್ಯಸುವದೂ ನಾವರಿಯೆವು. ಈ ಸಂದರ್ಭವು ಸ್ತೇಫನನು ವಿಜಯವನು ಸಾಧಿಸಿದ್ದು ತನ್ನ ಮಾನಸಿಕ ಶೌರ್ಯದಿಂದಲ್ಲ, ಆದರೆ ದೇವರ ಸಹಾಯದಿಂದಲೇ ಆಗಿದೆ. ಹೀಗೆ ಮತ್ತು ಹೆಚ್ಚಾದ ಇತರ (ಇಂಗ್ಲೀಷ ಭಾಷೆಯ) ಭಾಷಾಂತರಗಳು ಇಂಗ್ಲೀಷ ಪದವನ್ನು "ಆತ್ಮನನ್ನು" ಸೂಚಿಸಲು ಬಳಸುತ್ತವೆ. [19]ಸ್ತೇಫನನ ದಿನಗಳಲ್ಲಿ ಹಳೆಯ ಒಡಂಬಡಿಕೆಯು ಅಧ್ಯಾಯಗಳು ಮತ್ತು ವಚನಗಳು ಎಂದು ವಿಭಾಗಿಸಲ್ಪಟ್ಟಿರಲಿಲ್ಲ. "ಅಧ್ಯಾಯಗಳು ಮತ್ತು ವಚನಗಳು" ಎಂಬ ಪದಗುಚ್ಛದ ಅರ್ಥವೆನೆಂದರೆ ಸ್ತೇಫನನು ದೇವವಾಕ್ಯಗಳನ್ನು ತನ್ನ ವಾದಕ್ಕೆ ಪೂರಕವಾಗಿ ಬಳಸುತ್ತಿದ್ದನು. [20]ಕ್ರೈಸ್ತರ ಮೇಲಿನ ಸೌಲನ ದ್ವೇಷವು ಒಂದೇ ರಾತ್ರಿಯಲ್ಲಿ ಅಭಿವೃದ್ಧಿಹೊಂದಲಿಲ್ಲ. ಸ್ತೇಫನನ ಬೋಧನೆಯ ಮತ್ತು ಸ್ತೇಫನನ ಉತ್ತರಕೊಡದ ಸಮರ್ಥನೆಯು ಸೌಲನಿಗೆ ಕಲ್ಲನ್ನು ಎಸೆಯುವಷ್ಟು ಯೇಸುವಿನ ಹೆಸರಿನ ಮೇಲೆ ಉನ್ಮತ್ತ ಆವೇಶವು ಬರಿಸಿತು.

[21]ಸೌಲನು ವಂಚನೆಯ ಸಾಕ್ಷಿಯ ಭಾಗವಾಗಿದ್ದನು ಎಂಬುದನ್ನು ನಾನು ನಂಬುವುದಿಲ್ಲ (22:3; 23:1). [22]"ದೇವದೂಷಣೆ" ಅಂದರೆ ಇದು "ವಿರುದ್ಧವಾಗಿ ಮಾತನಾಡುವುದು" ಎಂಬ ಅರ್ಥದಲ್ಲಿ ಬಳಿಕೆಯಾಗಿದೆ. ಪದಕೋಶದಲ್ಲಿ ನೋಡಿರಿ ದೇವದೂಷಣೆ. [23]ಅನೇಕ ಶಾಸ್ತ್ರಿಗಳು ಫರಿಸಾಯರಾಗಿದ್ದರು (ಪದಕೋಶದಲ್ಲಿ "ಶಾಸ್ತ್ರಿಗಳು" ನೋಡಿರಿ ಅಪೊಸ್ತಲರ ಕೃತ್ಯಗಳ ಪುಸ್ತಕ 1ರಲ್ಲಿ "ಫರಿಸಾಯರು" ಸಹ ನೋಡಿರಿ.) ಈ ವಿಚಾರದಂತೆ, ಸದ್ದುಕಾಯರು ಕ್ರೈಸ್ತರಿಗೆ ಹಿಂಸೆಕೊಡುವುದರಲ್ಲಿ ನಾಯಕತ್ವವನ್ನು ತೆಗೆದುಕೊಂಡ ಕಾರಣ ಅಪೊಸ್ತಲರು, ಸದ್ದುಕಾಯರು ನಂಬದಿರುವ ಆದರೆ ಫರಿಸಾಯರು ನಂಬುತ್ತಿದ್ದ ಪುನರುತ್ಥಾನದ ಬಗೆಗೆ ಕಲಿಸಿದರು. [24]ಸದ್ದುಕಾಯರು ರಾಜಕೀಯವಾಗಿ ಶಕ್ತಿಯುತರಾಗಿದ್ದರೂ, ಅವರು ಓಣಿಗಳಲ್ಲಿನ ಸಾಮಾನ್ಯ ಜನರ ಮೇಲೆ ಅಲ್ಪ ಪ್ರಭಾವವನ್ನು ಹೊಂದಿದ್ದರು. [25]ಭಾನುವಾರ "ಹೊಸನ್ನ" ಶುಕ್ರುವಾರ "ಅವರನ್ನು ಕ್ರೂಜೆಗೆ ಹಾಕಿಸು." ಎಂಬಂತೆ ಜನರ ಮಾನಸಿಕಸ್ಥಿತಿಯು ಎಷ್ಟು ಬೇಗನೇ ಹೇಗೆ ಬದಲಾವಣೆ ಹೊಂದುವುದು ಎಂಬುವುದನ್ನು ಯೇಸು ನೋಡಿದನು. ಸ್ತೇಫನನ ಪ್ರಕರಣದಲ್ಲಿ, ಸ್ತೇಫನನು ದೇವರು ಮತ್ತು ಮೋಶೆಯ, ಯೆಹೂದಿ ಸಂಪ್ರದಾಯಗಳವಿರುದ್ಧ ಕ್ರಮತೆಗೆದುಕೊಳ್ಳುವ ಧಾರ್ಮಿಕ ಪ್ರತಿಕ್ರಿಯೆಯು, ಬಹುಶಃ ಅದೊಂದು ಪ್ರಾಯೋಗಿಕ ಪ್ರತಿಕ್ರಿಯೆಯಾಗಿರಬಹುದು: ಯೆರೂಸಲೇಮಿನ ಆರ್ಥಿಕತೆಯ ಆಧಾರದ ನಿಜಾಂಶವು ದೇವಾಲಯವು ಅಲ್ಲಿರುವುದೇ ಆಗಿದ್ದು (ಪ್ರತಿ ವರ್ಷ ಇದು ಮಿಲಿಯನಗಟ್ಟಲೆ ಜನರನ್ನು ಈ ಪಟ್ಟಣಕ್ಕೆ ಕರೆತರುವುದಾಗಿತ್ತು) - ಮತ್ತು ಸ್ತೇಫನನು ದೇವಾಲಯದ ವಿರುದ್ಧ ಮಾತನಾಡದ್ದಿದ್ದರಿಂದ ದಂಡಿಸಲ್ಪಟ್ಟನು! (ಧಾರ್ಮಿಕ ದೇವಾಲಯಕ್ಕೆ ಸಂಭಂಧಿಸಿದಕ್ಕೆ ಹೋಲಿಕೆಯಾದ ಪ್ರತಿಕ್ರಿಯೆಗಳು, ಟಿಪ್ಪಣಿ 19:23-41.) [26]"ಅವನನ್ನು ಹೊರಗೆ ಎಳೆದರು" (ಹಿಡಿದುಕೊಂಡು ಹೋದರು) ಇದರ ಅರ್ಥ ಅವರು ಮಂಡಳಿಯ ಕೊಣೆಯಲ್ಲಿ ಸ್ತೇಫನನನ್ನು ಎಳೆದರು, ಒದೆದರು ಮತ್ತು ಹೊಡೆದಾಡಿದರು ಎಂದಲ್ಲ. "ಎಳೆದರು" ಇದರ ಗ್ರೀಕ ಭಾಷಾಂತರವು ಸಹಜವಾಗಿ ಸೂಚಿಸುವುದೇನೆಂದರೆ ಅನಪೇಕ್ಷಿತ ಕ್ರಿಯೆಯ ಸ್ವಭಾವವೇ ಆಗಿದೆ. ಯು "ಅವರು ಸ್ತೇಫನನನ್ನು ಬಂಧಿಸಿದರು." ಈ ವಿಚಾರವನ್ನು ಪ್ರತಿಬಿಂಬಿಸುತ್ತದೆ. [27]ಸ್ತೇಫನನು ಸಂಪೂರ್ಣವಾಗಿ ಏಕಾಂಗಿಯಾಗಿ ನಿಂತುಕೊಂಡಿದ್ದಾನೆ ಎಂದು ಚಿತ್ರಿಸಲ್ಪಟ್ಟಿದ್ದಾನೆ, ಇದು ಮುಚ್ಚಲ್ಪಟ್ಟಂಥ ಸಭೆಯಾಗಿತ್ತು (ಕೂಟ) ಮತ್ತು ಅಪೊಸ್ತಲರನ್ನು ಒಳಗೊಂಡು ಯಾರೊಬ್ಬರೂ ಒಳಗೆ ಪ್ರವೇಶಿಸುವಂತಿರಲಿಲ್ಲ. [28]ಯೆಹೂದಿಗಳು, ಮೋಶೆಯು ಮೌಖಿಕವಾಗಿ ಕೊಟ್ಟಂತಹ ಮತ್ತು ತಲೆಮಾರಿನಿಂದ ತಲೆಮಾರಿಗೆ ಬಂದಂತ ಅಲಿಖಿತ ನಿಯಮಗಳನ್ನು ಹೊಂದಿದ್ದರು. ಹೀಗೆ ಅವರು ಸಂಪ್ರದಾಯಗಳು/ಆಚರಣೆಗಳು ನಿಯಮಗಳಂತೆ ಕಟ್ಟಲ್ಪಟ್ಟಂತವುಗಳು ಆಗಿದ್ದವುಗಳನ್ನು ಅವರು ಆಚರಿಸುವವರಾಗಿದ್ದರು. ನಿಶ್ಚಯವಾಗಿ, ಯೇಸು ಈ ಅಲಿಖತ ನಿಯಮಗಳು ದೇವರಿಂದ ಬಂದವುಗಳು ಎಂದು ಮಾನ್ಯಮಾಡುತ್ತಿರಲಿಲ್ಲ. ನಿಯಮಗಳು ದೇವರ ಆಜ್ಞೆಗಳ ವಿಷಯಗಳನ್ನು ಹೊಂದಿವೆ,

ಸಂಪ್ರದಾಯಗಳು/ಆಚರಣೆಗಳು ಮಾನವನ ಆಜ್ಞೆಗಳಾಗಿವೆ, ಎಂದು ಯೇಸು ಬೋಧಿಸಿದನು. [29]ಕ್ರಿ.ಶ. 70ರಲ್ಲಿ ರೋಮನ್ನರಿಂದ ಆಗುವ ಯೆರೂಸಲೇಮಿನ ನಾಶನವನ್ನು ಯೇಸುವು ಸೂಚಿಸುತ್ತಾನೆ. ಯೇಸುವಿನ ಇನ್ನೊಂದು ಬೋಧನೆಯು ತಪ್ಪಾಗಿ ಅರ್ಥೈಸಲ್ಪಟ್ಟಿದೆಂದರೆ, ಆತನು ತನ್ನ ದೇಹವನ್ನು "ದೇವಾಲಯಕ್ಕೆ" ಹೋಲಿಸಿದ್ದೇ ಆಗಿದೆ (ಯೋಹಾನ 2:18-22; ಮಾರ್ಕ 14:58; 15:29 ನೋಡಿರಿ). [30]ಸ್ತೇಫನನ (ಮುಖವು) ಅದ್ಭುತವಾಗಿ ಕಾಣಿಸಿಕೊಳ್ಳುವಿಕೆಯ ಪ್ರಾಥಮಿಕವಾದ ಆಪಾದನೆ ಎಂದರೆ ಮಂಡಳಿಯು ಅದ್ಭುತವನ್ನು ನೋಡಿದರೂ ಅದಕ್ಕೆ ಪ್ರತಿಕ್ರಿಯಿಸದಿರುವುದೇ ಆಗಿದೆ. ಹೇಗೋ, ಇತರ ಅದ್ಭುತಗಳು ಕಠಿಣಮಯವಾದ ಹೃದಯಗಳಲ್ಲಿ ನಂಬಿಕೆಯನ್ನು ಉತ್ಪಾದಿಸುತ್ತಿರಲಿಲ್ಲ (4:16).

[31]ಮಹಾಯಾಜಕನು ಅನ್ನ ಅಥವಾ ಕಾಯಫ ಆಗಿದ್ದರು. ಮಹಾಯಾಜಕನು ಸಭಾಮಂದಿರವನ್ನು ನಡೆಸುತ್ತಿದ್ದುದರಿಂದ ಕಾಯಫನೇ ಅದರ ಮುಖ್ಯಸ್ಥನಾಗಿರಬೇಕೆಂದು ನಾನು ಊಹಿಸುತ್ತೇನೆ. [32]KJVಯಲ್ಲಿ "ಅವರು ಅವನ ಮೇಲೆ ಹಲ್ಲುಕಡಿದರು" ಎಂದಿದ್ದು, ಇದು ಅವರು ಸ್ತೇಫನನನ್ನು ಕಡಿಯಲು ಪ್ರಯತ್ನಿಸಿದರು ಎಂಬ ಅರ್ಥವನ್ನು ಕೊಡುತ್ತದೆ! "ಅವನೆಡೆಗೆ" ಎಂಬುದರ ಬದಲಾಗಿ "ಅವನ ಮೇಲೆ" ಎಂದು ಸೂಚಿಸುವದು ಸರಿ ಎನ್ನಿಸುತ್ತದೆ. ಬೈಬಲ್ಲಿನಲ್ಲಿ, ಹಲ್ಲುಕಡಿಯೋಣವು ಸಾಮಾನ್ಯವಾಗಿ ಕೋಪೋದ್ರೇಕವನ್ನೂ (ಯೋಬ 16:9; ಕೀರ್ತನೆ 35:16) ಅಥವಾ ನಿರಾಶೆಯನ್ನೂ (ಲೂಕ 13:28) ಸೂಚಿಸುವಂತದ್ದಾಗಿದೆ. ಈ ದಿನಗಳಲ್ಲಿ ಇದು ಒತ್ತಡದ ಚಿನ್ಹೆಯಾಗಿ ಗುರುತಿಸಲ್ಪಟ್ಟಿದೆ. [33]ಮತ್ತಾಯನು 8:12; 13:42, 50; 24:51; 25:30; ಲೂಕ 13:28. ಗ್ರೀಕಪದವು ಭಾಷಾಂತರವಾಗಿ "ಅರೆಯುವದು" ಇದು "ಕಡಿಯುವದು" ಎಂದೂ ಭಾಷಾಂತರ ಮಾಡಬಹುದಾಗಿದೆ, ಲೂಕನೂ ಸಹ ಮಂಡಳಿಯನ್ನು ಕಾಡುನಾಯಿಗಳ ಗುಂಪಿಗೆ ಹೋಲಿಸಿದ್ದಾನೆ! [34]ಆ ಸಮಯದಲ್ಲಿ ಗಮಲಿಯೇಲನು ಉಪಸ್ಥಿತನಿರಲಿಲ್ಲವೇ? ಆತನು ಎರಡನೇ ಸಾರಿ ಮಂಡಳಿಯನ್ನು ವಿರೋಧಿಸುವ ಆಯ್ಕೆಯನ್ನು ಮಾಡಿಕೊಳ್ಳಲಿಲ್ಲವೇ? ನೈತಿಕವಾಗಿ ಕೆಟ್ಟ ದಿನಗಳಲ್ಲಿ ಗಮಲಿಯೇಲನು ಈ ಕಾರ್ಯವನ್ನು ಕೈಗೆತ್ತಿಕೊಳ್ಳಲು ಅನುಮತಿಸಿದನೇ ಎಂಬುದು ನಂಬಲು ಕಷ್ಟಸಾಧ್ಯವಾದುದು. [35]ಕೆಲ ಸಮಯಗಳಲ್ಲಿ ದೇವರು ಅಂಥ ದರ್ಶನವನ್ನು ಪೌಲನಿಗೆ ಕೊಟ್ಟನು (ಗಮನಿಸಿ 18:9, 10; 23:11; 27:23, 24). ಇಂಥ ದರ್ಶನಗಳು ನಂತರದಲ್ಲಿ ನಂಬಿಕೆಗಾಗಿ ಪ್ರಾಣತೆತ್ತವರನ್ನು ಧೈರ್ಯಪಡಿಸುವಂತದ್ದಾಗಿದ್ದವು ಎಂಬುದರಲ್ಲಿ ಯಾವ ಸಂಶಯವಿಲ್ಲ. [36]ನಾವು ನಮ್ಮ ಕಾಲುಗಳನ್ನು ಅಂಥವರಿಗೆ ಗೌರವವನ್ನು ಸೂಚಿಸಲು ಎತ್ತಬೇಕು. ಯಾಕೆ ಯೇಸು ಕೂತಿರುವುದರ ಬದಲಾಗಿ ಎದ್ದು ನಿಂತುಕೊಂಡಿದ್ದನ್ನು ಚಿತ್ರಿಸಲಾಗಿದೆ ಎಂಬುವಂತಹದಕ್ಕೆ ಇಲ್ಲಿ ಕೊಡಲಾದಂತಹ ಇತರ ಸಲಹೆಗಳು: ಆತನು ಸ್ತೇಫನನನ್ನು ತನ್ನ ತರೆದ ಕೈಗಳಿಂದ ಸ್ವಾಗತಿಸಲು ಸಿದ್ಧನಾಗಿ ಅಲ್ಲಿ ನಿಂತಿದ್ದನು; ಸ್ತೇಫನನ ಪ್ರತಿಪಾದನೆಗಾಗಿ ಮತ್ತು ದೇವರ ಮುಂದೆ ಆತನನ್ನು ಸಮರ್ಥಿಸಿಕೊಳ್ಳಲು ಸಿದ್ಧನಾಗಿ ನಿಂತಿದ್ದನು; ಸ್ತೇಫನನ ಕೊಲೆಪಾತಕಿಗಳಿಗೆ ನ್ಯಾಯ ತೀರಿಸಲಿಕ್ಕೆ ಬರಲು ಸಿದ್ಧನಾಗಿ ನಿಂತಿದ್ದನು ಮುಂತಾದವುಗಳು. ಕಾರಣವು ಏನೇ ಇರಲಿ, ಅನೇಕ ಭಾಷ್ಯಕಾರರು ಯೇಸು ನಿಂತಿರುವುದನ್ನು ಚಿತ್ರಿಸಿರುವ ವಿಷಯದಲ್ಲಿ ಒಂದು ಮಹತ್ವವಾದ ಮಾಹಿತಿಯು ಇರುವುದನ್ನು ಯೋಚಿಸುವವರಾಗಿದ್ದಾರೆ. [37]ಇದು ಮೆಸ್ಸೀಯನ ಪಾರಿಭಾಷೆಯಾಗಿದ್ದು (ದಾನಿಯೇಲ 7:13, 14) ಯೇಸುವಿನಿಂದ ತನ್ನನ್ನು ಸೂಚಿಸಿಕೊಳ್ಳಲು ಯಾವಾಗಲೂ ಬಳಸುತ್ತಿದ್ದರು. [38]ಹೇಗೂ, ಯೇಸು ಅಥವಾ ಸ್ತೇಫನನು, ಸತ್ಯಕ್ಕಾಗಿ ಮಾತನಾಡಿದ್ದಕ್ಕೋಸ್ಕರ ದೇವದೂಷಣೆಯ ದೋಷಿಗಳಾಗಿದ್ದರು. [39]"ಕಡೆಯ ಹುಲ್ಲಿನಕಂತೆ" (ಅಥವಾ ಕೊನೆಯ ಹುಲ್ಲಿನ ಕಂತೆ) ಉಪಮಾಲಂಕಾರ ವಾಗಿದ್ದು ಇದು [ಕಡೆಯ] ಹುಲ್ಲು [ಅಂತಿಮವಾಗಿ] ಒಂಟೆಯ ಬೆನ್ನನ್ನು ಮುರಿಯಿತು ಇದು ಈಗಾಗಲೇ ಹುಲ್ಲಿನ ದೊಡ್ಡ ಹೊರೆಯಿಂದ ಭಾರವಾಗಿದೆ. [40]ಇತರ ಸ್ಥಳಗಳಲ್ಲಿ ಇರುವವರು ಅಲ್ಲಿರುವ ಅಲ್ಲಿನ ಉನ್ನತ ನ್ಯಾಯಾಲಯದ ಹೆಸರಿನ ಬದಲಾಗಿ ಬೇರೆ ಹೆಸರನ್ನು ಇಟ್ಟಿರುತ್ತಾರೆ.

[41]ರೋಮನ್ನರು ಮಂಡಳಿಯಿಂದ ಮರಣದ ಶಿಕ್ಷೆಯನ್ನು ನೀಡುವ ಅಧಿಕಾರವನ್ನು ತೆಗೆದುಕೊಂಡಿದ್ದರಿಂದ (ದೇವಾಲಯವನ್ನು ಅಪವಿತ್ರಗೊಳಿಸುವ ವಿಷಯವನ್ನು ಬಿಟ್ಟು) ಪಂಡಿತರು "ಮಂಡಳಿಯು ಇದರೊಂದಿಗೆ ಹೇಗೆ ಹೊರಗೆ ಬಂದಿತು ಎಂಬ ಸಮಸ್ಯೆಯೊಂದಿಗೆ ಹೋರಾಡುತ್ತಿರುತ್ತಾರೆ. (1) ಬಹುಶಃ ಅವರು "ಅದರೊಂದಿಗೆ ಹೊರಗೆ ಹೋಗಲಿಲ್ಲ"; ಲೂಕನು ರೋಮದಲ್ಲಿನ ಪ್ರತಿಕ್ರಿಯೆಯ ಬಗೆಗೆ ನಮಗೆ ಹೇಳಿಲ್ಲ. (2) ಬಹುಶಃ ದೇವಾಲಯವು ಇದರಲ್ಲಿ ಒಳಗೊಂಡಿರುವುದರಿಂದ "ಸ್ತೇಫನನು ದೇವಾಲಯನ್ನು ಅಪವಿತ್ರಗೊಳಿಸದನು" ಎಂದು ರೋಮ ಅಧಿಕಾರಿಗಳನ್ನು ಅವರು ಒಪ್ಪಿಸಿರಬಹುದು. (3) ಬಹುಶಃ ರೋಮ ಅಧಿಕಾರಿಗಳು ಏನು ಸಂಭವಿಸಿತೆಂದು ನಿಜಮಾಡುವಲ್ಲಿ ಅಸಮರ್ಥರಾದರು. (ರೋಮ ಸೇನಾಧಿಪತಿಯು ಹಬ್ಬದ ದಿನಗಳ ಆರಂಭದಲ್ಲಿ ಕೈಸರೆಯಲ್ಲಿ ಇರುತ್ತಿದ್ದನು.) (4) ಬಹುಶಃ ರೋಮನ್ನ ಅಧಿಕಾರಿಗಳು ಏನು ಸಂಭವಿಸಿತ್ತು ಎಂಬುದನ್ನು ತಿಳಿದಿದ್ದರು ಆದರೆ ಅದನ್ನು ನೋಡಲು ಇನ್ನೊಂದು ಮಾರ್ಗವನ್ನು ನಿರ್ಧರಿಸಿದರು. ಇದನ್ನು ಅರಿತುಕೊಳ್ಳುವದು ಮಹತ್ವದ್ದು ಎಂದು ಪರಿಶುದ್ದಾತ್ಮನು ಯೋಚಿಸುವುದಿಲ್ಲ. [42]ಅಲ್ಲಿಮತವನ್ನು ಹಾಕಿದರೋ ಅಥವಾ

ಆಳವಾಗಿ ಚಿಂತಿಸಿ ನಿರ್ಧಾರ ತೆಗೆದುಕೊಂ ಡರೋ ಇದರ ಬಗೆಗೆ ನನಗ್ಯಾವ ಸೂಚನೆಯೂ ಇಲ್ಲ. ಇದು ಜನಜಂಗುಳಿಯ ಕಾರ್ಯವಾ ಗಿತ್ತು. [43]ಯೆಹೂದಿ ಸಂಪ್ರದಾಯಗಳು ನಂತರದಲ್ಲಿ ಕಾಯ್ದೆಯ ಪಟ್ಟಿಯಾದ ತಾಲ್ಮುಂಡ ಆಯಿತು, ಇದು "ನಿಯಮಗಳ ಯೆಹೂದಿ ವಿವರಣೆ" ಎಂದು ಕರೆಯಲ್ಪಟ್ಟಿರಬಹುದು. [44]"ಯೌವನಸ್ಥ ಮನುಷ್ಯನು" ಇದು ಸೌಲನು ನಾಲ್ವತ್ತು ವಯಸ್ಸಿನ ಕೆಳಗಿನವನಾಗಿದ್ದನು ಎಂಬುದನ್ನು ಸೂಚಿಸುತ್ತದೆ. ಆತನು ಬಹುಶಃ ಆ ಸಮಯದಲ್ಲಿ ಆತನು ಮೂವತ್ತು ಮತ್ತು ನಾಲ್ವತ್ತು ವಯಸ್ಸಿನ ಮಧ್ಯದಲ್ಲಿ ಇರಬಹುದು. [45]ಸೌಲನು ಮಂಡಳಿಯ ಸದಸ್ಯನಾಗಿದ್ದನೋ ಇಲ್ಲವೋ ಎಂಬ ದೀರ್ಘ ಚರ್ಚೆಯನ್ನು ಈ ಪುಸ್ತಕದ ನಂತರದಲ್ಲಿ ಬರುವ ಪೌಲನ ಪರಿವರ್ತನೆಯ ಮೇಲಿರುವ ಬೋಧನೆಯಲ್ಲಿ ನೋಡಿರಿ. [46]"ಪಾದಗಳ ಬಳಿಯಲ್ಲಿ" ಇದು ಯಾವಾಗಲೂ ಒಪ್ಪಿಸಿಕೊಳ್ಳುವಿಕೆಯನ್ನು ಸೂಚಿಸುವದರಿಂದ (4:35, 37; 5:2ರ ಟಿಪ್ಪಣಿಗಳನ್ನು ನೋಡಿರಿ) ಮತ್ತು ಸ್ತೇಫನನನ್ನು ಕೊಲ್ಲಲ್ಪಟ್ಟ (8:1) "ಆ ದಿನದಲ್ಲಿ" ಪ್ರಾರಂಭವಾದ ಕ್ರೈಸ್ತರ ವಿರುದ್ಧ ಹಿಂಸೆಗೆ ಮುಖ್ಯ ಪ್ರಚೋದಕನು ಸೌಲನು ಆಗಿದ್ದರಿಂದ ಸೌಲನೇ ಆ ಮರಣದಂಡನೆಗೆ ಜವಾಬ್ದಾರರಲ್ಲಿ ಒಬ್ಬನಾಗಿದ್ದನು. ಕ್ರೈಸ್ತರು ಕೊಲ್ಲಲ್ಪಡುವಾಗ ಸೌಲನು ಎಂದಿಗೂ ಕೇವಲ ಪ್ರೇಕ್ಷಕನಾಗಿರಲು ಬಯಸುತ್ತಿರಲಿಲ್ಲ (26:10). [47]ಕಲ್ಲೆಸೆಯುವದು ಹೇಗೆ ನಡೆಸಬೇಕೆಂಬುದಕ್ಕೆ ಸಂಬಂಧಿತವಾದ ವಿವರವಾದ ಸೂಚನೆಗಳು ಮುಂದಿನ ಪೀಳಿಯವರಿಗೆ ನಂತರದಲ್ಲಿ ಕೊಡಲ್ಪಟ್ಟಿವೆ. ಸ್ತೇಪನನಿಗೆ ಕಲ್ಲೆಸೆದುಕೊಂಡ ದಿವಸಗಳಲ್ಲಿ ಈ ಆರ್ಗಸೂಚಿಗಳು ಪ್ರಚಲಿತದಲ್ಲಿ ಇದ್ದವೋ ಇಲ್ಲವೋ ನಮಗೆ ತಿಳಿದಿಲ್ಲ. ನಿಜಸಂಗತಿಯೆಂದರೆ ಸ್ತೇಫನನು ಮೊಣಕಾಲೂರಲು ಸಮರ್ಥನಾಗಿದ್ದನು (ವಚನ 60) ಎಂಬುದು ಅನೌಪಚಾರಕರವಾ ದುದು ಎಂಬುದಕ್ಕೆ ನನ್ನನ್ನು ನಡೆಸುತ್ತದೆ. [48]ಸತ್ಯವೇದದಲ್ಲಿ ಸಿಕ್ಕದ ನೇರವಾಗಿ ಯೇಸುವಿಗೆ ಸಂಬೋಧಿ ಸಿದ ಪ್ರಾರ್ಥನೆಗಳಲ್ಲಿ ಇದೂ ಒಂದಾಗಿದೆ. ಯೇಸುವಿಗೆ ನೇರವಾಗಿ ಸಂಬೋಧಿಸುವ ಪ್ರಾರ್ಥನೆಗಳು ತಪ್ಪಲ್ಲ ಎಂದು ಇದು ಸೂಚಿಸುವುದಾಗಿದೆ. (ನಾವು ಬಳಸುವ ಕೆಲ ಹಾಡುಗಳು ನೇರವಾಗಿ ಯೇಸುವನ್ನು ಸಂಬೋಧಿಸುವಂತವುಗಳಾಗಿವೆ), ಆದರೆ ನಾವು ನೇರವಾಗಿ ಯೇಸುವನ್ನು ಸಂಬೋಧಿಸಿ, ಮಾಡಿದ ಪ್ರಾರ್ಥನೆಗಳು ಕೆಲವೇ ಕೆಲವು ಇದ್ದುದರಿಂದ ಇವುಗಳನ್ನು ಸಾಮಾನ್ಯ ಸಂಗತಿಗಳಿಗೆ ಅಪವಾದಗಳಾ ಗಿವೆ. ಸರಿಯಾದ ನಿಯಮವೆಂದರೆ ಪ್ರಾರ್ಥನೆಯ ಯೇಸುವಿನ ಮೂಲಕ ದೇವರಿಗೆ ಮಾಡುವುದಾಗಿದೆ (1 ತಿಮೊಥೆ 2:5; ಯೋಹಾನ 16:23, 24). [49]ಮೂಲ ಭಾಗದಲ್ಲಿ ಅಕ್ಷರಸಹ "ತನ್ನ ಮೊಣಕಾಲೂರಿ" ಎಂದಿದ್ದು ಬುದ್ಧಿಪೂರ್ವಕ ಕಾರ್ಯವನ್ನ ಸೂಚಿಸುವುದಾಗಿದೆ. ಹೀಗೆ ಇದೆ ಸೂಚಿಸುವುದೇನೆಂದರೆ: "ಆತನು ಮೊಣಕಾಲನ್ನು ಊರಿದನು" "ತನ್ನ ಮೊಣಕಾಲಿನ ಮೇಲೆ ಬಿದ್ದನು" ಎಂಬುದು ಸ್ತೇಫನನು ಅಲ್ಲಿಯವರೆಗೆ ನಿಂತುಕೊಂಡಿದ್ದನು ಮತ್ತು ನಂತರ ತನ್ನ ಮೊಣಕಾಲುಗಳ ಮೇಲೆ ಬಿದ್ದನು ಎಂದು ಸೂಚಿಸುವುದಾಗಿದೆ. ಹೇಗೂ, ಆತನು ಬಯಲಲ್ಲಿ ಬಿದ್ದುಕೊಂಡಿದ್ದನು ಮತ್ತು ತನ್ನ ಮೊಣಕಾಲುಗಳ ಮೇಲೆ ಹೋರಾ ಡುತ್ತಿದ್ದನು. ಹೇಗೋ, ಆತನು ಬುದ್ಧಿಪೂರ್ವಕವಾಗಿ ಮೋಣಕಾಲೂರಿದ ಸ್ಥಿತಿಯಲ್ಲಿ ತನ್ನ ಹಿಂಸಕರಿಗಾಗಿ ಪ್ರಾರ್ಥಿಸುತ್ತಾ ತಾಳಿಕೊಂಡನು ಎಂದು ತೋರುತ್ತದೆ. [50]ಯೇಸುವು ಮರಣವನ್ನು ನಿದ್ರೆಯೆಂಬತೆ ಮಾತನಾಡಿದನು (ಯೋಹಾನ 11:11), ಮತ್ತು ಹೊಸ ಒಡಂಬಡಿಕೆಯ ಲೇಖಕರು ಈ ಪದಗುಚ್ಚವನ್ನು ಅಳಿಸಿಕೊಂಡಿದ್ದಾರೆ (1 ಥೆಸಲೋನಿಕ 4:13). ಇದು ದೇಹವನ್ನು ಸೂಚಿಸುವುದಾಗಿದೆ, ಆತ್ಮವನ್ನಲ್ಲ, ಮತ್ತು ಮರಣವು ಕೊನೆಯಲ್ಲ ಎಂಬುದನ್ನು ಒತ್ತಿಹೇಳುತ್ತದೆ, ಅಲ್ಲಿ ದೇಹದ ಪುನರುತ್ಥಾನವೂ ಉಂಟು (1ಕೊರಿಂಥೆ 15). ಆಂಗ್ಲಪದವಾದ "ಸಮಾಧಿ" ಇದರ ಅಕ್ಷರಸಹ ಅರ್ಥವು "ಮಲಗುವ ಸ್ಥಳ" ಎಂದಾಗಿದೆ.

[51]ಸ್ತೇಫನನ ಪ್ರಾರ್ಥನೆಯು ಹಳೆ ಒಡಂಬಡಿಕೆಯ ದೂತನು ತನ್ನ ನಂಬಿಕೆಗಾಗಿ ಕಲ್ಲೆಸೆದು ಮರಣಕ್ಕೆ ಗುರಿ ಮಾಡಿಸಿಕೊಂಡಾಗ ಮಾಡಿದ ಪ್ರಾರ್ಥನೆಗಿಂತ ಸಂಪೂರ್ಣವಾಗಿ ವಿಭಿನ್ನವಾ ಗಿದೆ. ಆ ದೂತನು "ಯೆಹೋವನು ನೋಡಿ ವಿಚಾರಿಸಲಿ" ಎಂದು ಪ್ರಾರ್ಥಿಸಿದನು! (2 ಪೂರ್ವ 24:22). [52]ಈ ಹೇಳಿಕೆಯು ಅನೇಕ ಲೇಖಕರಿಂದ ವ್ಯಾಖ್ಯಾನಿಸಲ್ಪಟ್ಟಿದೆ. ಸ್ತೇಫನನ ಮರಣದ ಪೂರ್ಣ ಪ್ರಭಾವವು ಸೌಲನ ಮೇಲಾದುದನ್ನು ನಾವು ಎಂದಿಗೂ ತಿಳಿದಿಲ್ಲ, ಆದರೆ ಯೇಸು ನಂತರ ಹೇಳಿದ್ದೇನೆಂದರೆ "ಮುಳ್ಳುಗೋಲನ್ನು ಒದೆಯುವದು" (26:14), ಸೌಲನಿಗೆ ಕಷ್ಟದಾಯಕವಾಗಿತ್ತು. ಯೇಸುವು ಹೆಚ್ಚಿನ ಸಂಖ್ಯೆಯ ಸಂಗತಿಗಳನ್ನು ಸೌಲ ಎಂಬ ಮುಳ್ಳುಗೋಲಗಳನ್ನು ಬಳಸುತ್ತಿದ್ದನು ಮತ್ತು ಅವುಗಳನ್ನು ನಿರ್ಲಕ್ಷಿಸುವದು ನೋವುಯುಕ್ತವಾಗಿತ್ತು. ಸ್ತೇಫನನ ನೋವುದಾಯಕ ನೆನಪುಗಳು ಅವುಗಳಲ್ಲಿ ಒಂದಾಗಿರಬಹುದು. ಲೂಕನು ಒತ್ತಿಹೇಳಿದ ನಿಜಾಂಶವೆಂದರೆ ಸೌಲನ ಉಪಸಿತನಿದ್ದನು ಎಂಬುದನ್ನು ಸೂಚಿಸುವುದಾಗಿದೆ. [53]"ಹಾಳುಮಾಡುವದು" ಎಂಬುದರ ಮೇಲೆ ಈ ಪುಸ್ತಕದಲ್ಲಿ ನಂತರದಲ್ಲಿ ಸಿಕ್ಕುವ "ಹರಡುತ್ತಿರುವ ಬೆಂಕಿ" ಈ ಪಾಠದಲ್ಲಿ ಸಿಕ್ಕುವ ಭಾಷ್ಯವನ್ನು ನೋಡಿರಿ (8:3).